ವಿಜಯಪುರ | ಸಂಪುಟ 04 | ಸಂಚಿಕೆ 192 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಬುಧವಾರ, ಸೆಪ್ಟೆಂಬರ್, 23, 2026

"ಡಿಕೆ ಶಿವಕುಮಾರ್ ಅವರ ಆಸ್ತಿ ಸಂಪಾದನೆ ವೈಯಕ್ತಿಕ ವಿಚಾರ. ಆದರೆ ಡಿಕೆಶಿಗಿಂತ ನಾಲ್ಕು ಪಟ್ಟು ಹೆಚ್ಚು ಆಸ್ತಿ ಎಚ್ ಡಿ ಕುಮಾರಸ್ವಾಮಿ ಅವರ ಬಳಿ ಇದೆ. ಏರ್ ಪೋರ್ಟ್ ರಸ್ತೆಯಲ್ಲಿ ಮತ್ತು ನೆಲಮಂಗಲ ರಸ್ತೆಯಲ್ಲೂ ಅವರ ಆಸ್ತಿ ಇದೆ. ಇದನ್ನೆಲ್ಲ ಎಚ್ಡಿಕೆ ಎಲ್ಲಿಂದ ಸಂಪಾದನೆ ಮಾಡಿದರು?"



■ ಚಲುವರಾಯಸ್ವಾಮಿ
ಸಚಿವರು

## ನಿನ್ನೆ ಡಾಂಬರ್, ಇಂದು ಗುಂಡಿ: ಕಲ್ಯಾಣ ಪಥ್‌ಗೆ ಒಂದೇ ದಿನದ 'ಕಲ್ಯಾಣ'!

### ಸುದ್ದಿ ಮಾಡಿದ ಬೆನ್ನಲ್ಲೇ ತಾರಾತುರಿಯಲ್ಲಿ ರಸ್ತೆ ನಿರ್ಮಾಣ । ಡಾಂಬರ್ ಹಾಕಿದ ಮರುದಿನವೇ ಕಿತ್ತುಹೋದ ಕಲ್ಯಾಣ ಪಥ್!

■ ಉದಯರಶ್ಮಿ ದಿನಪತ್ರಿಕೆ



ಅಫಜಲಪುರ: ತಾಲೂಕಿನ ಚಿಂಚೋಳಿ ರಸ್ತೆಯ ಕಲ್ಯಾಣ ಪಥ್ ಕಾಮಗಾರಿ ಗುಣಮಟ್ಟದ ಬಗ್ಗೆ ಇದೀಗ ಗಂಭೀರ ಪ್ರಶ್ನೆಗಳು ಎದ್ದಿವೆ. ರಸ್ತೆ ಕಾಮಗಾರಿ ವಿಳಂಬವಾಗಿರುವ ಕುರಿತು 'ಉದಯರಶ್ಮಿ' ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾದ ಬೆನ್ನಲ್ಲೇ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ತಾರಾತುರಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿರುವಂತೆ ಕಂಡುಬಂದಿದ್ದು, ಡಾಂಬರ್ ಹಾಕಿದ ಮರುದಿನವೇ ರಸ್ತೆಯ ಮೇಲ್ಪದರ ಕಿತ್ತುಹೋಗುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕಿದ್ದರೂ ಹಲವು ತಿಂಗಳು ವಿಳಂಬವಾಗಿತ್ತು. ಈ ಕುರಿತು ಮಾಧ್ಯಮಗಳಲ್ಲಿ ವರದಿ ಪ್ರಕಟವಾದ ನಂತರ ಕಾಮಗಾರಿಗೆ ಏಕಾಏಕಿ ವೇಗ ನೀಡಲಾಗಿದೆ. ಆದರೆ ಕಾಮಗಾರಿ ಮುಗಿಸಿದ ಕೆಲವೇ ದಿನಗಳಲ್ಲಿ ರಸ್ತೆ ಕಿತ್ತು ಹೋಗುತ್ತಿರುವುದು ಡಾಂಬರೀಕರಣದ ಗುಣಮಟ್ಟ, ಬಳಸಿದ ಸಾಮಗ್ರಿ ಹಾಗೂ ಕಾಮಗಾರಿಯ ಮೇಲ್ವಿಚಾರಣೆ ಕುರಿತು ಅನುಮಾನ ಮೂಡಿಸಿದೆ.

ಸ್ಥಳೀಯರ ಆರೋಪದ ಪ್ರಕಾರ, ರಸ್ತೆಗೆ ಸಮರ್ಪಕವಾಗಿ ತಳಹದಿ ಸಿದ್ಧಪಡಿಸಲಾಗಿದೆಯೇ? ನಿಯಮಾನುಸಾರ ಡಾಂಬರ್ ಹಾಕಲಾಗಿದೆಯೇ? ಗುಣಮಟ್ಟದ ಸಾಮಗ್ರಿ ಬಳಸಲಾಗಿದೆಯೇ? ಎಂಬ ಪ್ರಶ್ನೆಗಳು ಎದುರಾಗಿವೆ.

ರಸ್ತೆ ಕಾಮಗಾರಿಯ ಗುಣಮಟ್ಟವನ್ನು ಸಂಬಂಧಿಸಿದ ಇಲಾಖೆ ತಕ್ಷಣ ಪರಿಶೀಲಿಸಿ, ತಾಂತ್ರಿಕ ಪರೀಕ್ಷೆ ನಡೆಸಬೇಕು. ಕಳಪೆ ಕಾಮಗಾರಿ ಸಾಬೀತಾದರೆ ಗುತ್ತಿಗೆದಾರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಂಡು, ಸಾರ್ವಜನಿಕರ ಹಣ ವ್ಯರ್ಥವಾಗದಂತೆ ರಸ್ತೆಯನ್ನು ಗುತ್ತಿಗೆದಾರರ ವೆಚ್ಚದಲ್ಲೇ ಗುಣಮಟ್ಟದ ಮಾನದಂಡದಂತೆ ಮರುನಿರ್ಮಿಸಬೇಕು ಎಂಬ ಒತ್ತಾಯ ಕೇಳಿಬಂದಿದೆ.

> "ಅಧಿಕಾರಿಗಳು ಗುತ್ತಿಗೆದಾರನ ಜೊತೆಗೆ ಸೇರಿದ್ದಾರೆ ಎನ್ನಿಸುತ್ತಿದೆ. ಆರು ತಿಂಗಳು ಮೊದಲೇ ಮುಗಿಯಬೇಕಾದ ರಸ್ತೆ, ಮಾಧ್ಯಮಗಳಲ್ಲಿ ಸುದ್ದಿ ಆದ ಮೇಲೆ ತಾರಾತುರಿಯಲ್ಲಿ ಮುಗಿಸಿ ಹಣ ಎತ್ತಿ ಹೋಗುವ ಹುನ್ನಾರ ಮಾಡಿದಂತಿದೆ. ಡಾಂಬರ್ ಹಾಕಿದ ಮರುದಿನವೇ ರಸ್ತೆ ಕಿತ್ತು ಹೋಗುತ್ತಿದೆ. ಇದು ಯಾವ ರೀತಿಯ ಗುಣಮಟ್ಟದ ಕಾಮಗಾರಿ ಎಂಬುದನ್ನು ಅಧಿಕಾರಿಗಳು ಜನರಿಗೆ ಸ್ಪಷ್ಟಪಡಿಸಬೇಕು."
>
> ■ ಚಂದ್ರಕಾಂತ್ ಮದರಿ
> ಸ್ಥಳೀಯರು

ಕಲ್ಯಾಣ ಪಥ್ ಹೆಸರಿನಲ್ಲಿ ನಿರ್ಮಾಣವಾಗುತ್ತಿರುವ ರಸ್ತೆ ಜನರಿಗೆ ಎಷ್ಟು ವರ್ಷ ಬಾಳಿಕೆ ಬರಲಿದೆ? ಅಥವಾ ಉದ್ಘಾಟನೆಗೂ ಮುನ್ನವೇ ಕಿತ್ತುಹೋಗುವ ಕಾಮಗಾರಿಯಾಗಲಿದೆಯೇ? ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

## ಅನಂತ್ ನಾಗ್‌ಗೆ ಪ್ರತಿಷ್ಠಿತ ಫಾಲ್ಕೆ ಪ್ರಶಸ್ತಿ ಪ್ರದಾನ

### ರಾಷ್ಟ್ರಪತಿಗಳಿಂದ ಕನ್ನಡದ ಖ್ಯಾತ ನಟನಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ । ಸ್ಟ್ಯಾಂಡಿಂಗ್ ಒವೇಶನ್ । ರಕ್ಷಿತ್ ಶೆಟ್ಟಿ ನಿರ್ಮಾಣದ 'ಮಿಥ್ಯ'ಗೆ 3 ರಾಷ್ಟ್ರ ಪ್ರಶಸ್ತಿ!

■ ಉದಯರಶ್ಮಿ ದಿನಪತ್ರಿಕೆ



ಏಕ್ತಾ ನಗರ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಕನ್ನಡದ ಖ್ಯಾತ ನಟ ಅನಂತ್ ನಾಗ್ ಅವರಿಗೆ ಭಾರತೀಯ ಚಲನಚಿತ್ರ ರಂಗದ ಅತ್ಯುನ್ನತ ಗೌರವವಾದ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದರು.

ಇದಕ್ಕೂ ಮುನ್ನ ಪ್ರಶಸ್ತಿ ಸಮಾರಂಭಕ್ಕೆ ಆಗಮಿಸಿದ ಅನಂತ್ ನಾಗ್ ಅವರಿಗೆ ಸ್ಟ್ಯಾಂಡಿಂಗ್ ಒವೇಶನ್ ನೀಡಲಾಯಿತು.

ಮಂಗಳವಾರ ಗುಜರಾತ್‌ನ ನರ್ಮದಾ ಜಿಲ್ಲೆಯ ಏಕ್ತಾ ನಗರದಲ್ಲಿ ನಡೆದ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿಗಳು, ಅನಂತ್ ನಾಗ್ ಅವರಿಗೆ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಿದರು.

ಐದು ದಶಕಗಳಿಗೂ ಹೆಚ್ಚು ಕಾಲ ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಅನಂತ್ ನಾಗ್ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ.

ಏಕ್ತಾ ನಗರದಲ್ಲಿರುವ 'ಸ್ಟ್ಯಾಚ್ಯೂ ಆಫ್ ಯೂನಿಟಿ'ಯಲ್ಲಿ ನಡೆಯುತ್ತಿರುವ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 2024ನೇ ಸಾಲಿನ ಸಿನಿಮಾ ಸಾಧಕರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ವಿವಿಧ ವಿಭಾಗಗಳಲ್ಲಿ ಒಟ್ಟು 92 ಮಂದಿ ಪ್ರಶಸ್ತಿಗಳನ್ನು ಸ್ವೀಕರಿಸಿದ್ದಾರೆ.


### ರಕ್ಷಿತ್ ಶೆಟ್ಟಿ ನಿರ್ಮಾಣದ 'ಮಿಥ್ಯ'ಗೆ 3 ರಾಷ್ಟ್ರ ಪ್ರಶಸ್ತಿ!



ರಕ್ಷಿತ್ ಶೆಟ್ಟಿ ನಿರ್ಮಾಣದ ಕನ್ನಡದ 'ಮಿಥ್ಯ' 3 ಪ್ರಶಸ್ತಿಗಳನ್ನು, ತುಳುವಿನ 'ಇಂಬು' 1 ಪ್ರಶಸ್ತಿಯನ್ನು ಪಡೆದುಕೊಂಡಿದ್ದು, ಇಂದು ಚಿತ್ರತಂಡದವರು ರಾಷ್ಟ್ರಪತಿಗಳಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ಕನ್ನಡ ಚಿತ್ರರಂಗದ ಅತ್ಯಂತ ಜನಪ್ರಿಯ ನಟ ರಕ್ಷಿತ್ ಶೆಟ್ಟಿ ಮಾಲೀಕತ್ವದ ಪರಂವಃ ಸ್ಟುಡಿಯೋಸ್ ಮತ್ತು ಪ್ರಸಿದ್ಧ ಕೆಆರ್‌ಜಿ ಸ್ಟುಡಿಯೋಸ್ ಜಂಟಿಯಾಗಿ ನಿರ್ಮಾಣ ಮಾಡಿರುವ ಮಿಥ್ಯ ಸಿನಿಮಾ 3 ಪ್ರಶಸ್ತಿಗೆ ಪಾತ್ರವಾಗಿದೆ.

### ಭಾರತೀಯ ಚಲನಚಿತ್ರ ರಂಗಕ್ಕೆ ಅಪಾರ ಕೊಡುಗೆ



ದೇಶದ ಅತ್ಯಂತ ಜನಪ್ರಿಯ ನಟರಲ್ಲಿ ಒಬ್ಬರಾದ ಅನಂತ್ ನಾಗ್, ಐದು ದಶಕಗಳ ಸುದೀರ್ಘ ಹಾಗೂ ಗಮನಾರ್ಹ ವೃತ್ತಿಜೀವನದಲ್ಲಿ 300ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದು, ಕನ್ನಡ ಹಾಗೂ ಭಾರತೀಯ ಚಲನಚಿತ್ರ ರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅನಂತ್ ನಾಗ್ ಅವರು ಜನಪ್ರಿಯ ಟೆಲಿವಿಷನ್ ಸರಣಿ 'ಮಾಲ್ಗುಡಿ ಡೇಸ್'ನಲ್ಲಿನ ತಮ್ಮ ಅಭಿನಯಕ್ಕೂ ಹೆಸರುವಾಸಿಯಾಗಿದ್ದಾರೆ. ಈ ಜನಪ್ರಿಯ ನಟನಿಗೆ 2025ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು.

## ಡಿ.13ಕ್ಕೆ 'ವೃಕ್ಷಥಾನ್ ಹೆರಿಟೇಜ್ ರನ್': 30 ಸಾವಿರ ನೋಂದಣಿ ಗುರಿ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಪರಿಸರ ಸಂರಕ್ಷಣೆ, ಹಸರೀಕರಣ ಹಾಗೂ ಪಾರಂಪರಿಕ ಸ್ಮಾರಕಗಳ ರಕ್ಷಣೆಯ ಮಹತ್ವವನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಡಿ. 13ರಂದು 'ವೃಕ್ಷಥಾನ್ ಹೆರಿಟೇಜ್ ರನ್–2026' ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಎಲ್ಲ ಇಲಾಖೆಯವರು ನೋಂದಣಿ ಮಾಡಿಕೊಂಡು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ್ ಕರೆ ನೀಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ವೃಕ್ಷಥಾನ್ ಹೆರಿಟೇಜ್ ರನ್–2026ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಬಾರಿ 30 ಸಾವಿರ ಓಟಗಾರರನ್ನು ನೋಂದಾಯಿಸುವ ಗುರಿ ಹೊಂದಲಾಗಿದೆ. ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.

ಕಳೆದ ಬಾರಿ ಸುಮಾರು 23 ಸಾವಿರ ಓಟಗಾರರು ಪಾಲ್ಗೊಂಡಿದ್ದು, ಈ ಬಾರಿ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಓಟಗಾರರು ಭಾಗವಹಿಸುವಂತೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ತಿಳಿಸಿದರು.

ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ಅಥ್ಲೀಟ್‌ಗಳನ್ನು ಗುರುತಿಸಿ ಓಟದಲ್ಲಿ ಪಾಲ್ಗೊಳ್ಳುವಂತೆ ಕ್ರೀಡಾ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಅವರ ನಿರಂತರ ಪ್ರಯತ್ನದಿಂದ ಜಿಲ್ಲೆಯಲ್ಲಿ ಕೋಟಿ ವೃಕ್ಷ ಅಭಿಯಾನ ಯಶಸ್ವಿಯಾಗಿ ಅನುಷ್ಠಾನಗೊಂಡಿದ್ದು, ಅರಣ್ಯೀಕರಣ ಪ್ರಮಾಣ ಹೆಚ್ಚಾಗಿದೆ.

### ನೋಂದಣಿಗೆ ಅ. 11 ಕೊನೆಯ ದಿನ । ಪರಿಸರ ಸಂರಕ್ಷಣೆ, ಹಸರೀಕರಣ, ಪಾರಂಪರಿಕ ಸ್ಮಾರಕಗಳ ಸಂರಕ್ಷಣೆಗೆ ಜಾಗೃತಿ । ಸಿಇಒ ರಿಷಿ ಆನಂದ್ ಕರೆ

ವಿಜಯಪುರದ ವೃಕ್ಷಥಾನ್ ಮತ್ತು ಹಸರೀಕರಣದ ಸಾಧನೆ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ವಿವಿಧ ರಾಜ್ಯಗಳಿಂದ ಆಗಮಿಸುವ ಓಟಗಾರರು ಪಾಲ್ಗೊಳ್ಳುವ ಈ ಕಾರ್ಯಕ್ರಮ ಜಿಲ್ಲೆಯ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದರು.

ವೃಕ್ಷಥಾನ್‌ನ ಉದ್ದೇಶ ಪರಿಸರ ಕಾಳಜಿಯೊಂದಿಗೆ ಜಿಲ್ಲೆಯ ಸ್ವಚ್ಛತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಹಸಿರೀಕರಣದ ಅಗತ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದೂ ಇದರ ಆಶಯವಾಗಿದೆ. ಆದ್ದರಿಂದ ಎಲ್ಲರೂ ಉತ್ಸಾಹದಿಂದ ಭಾಗವಹಿಸಬೇಕು ಎಂದು ಹೇಳಿದರು.

ಅ.11 ನೋಂದಣಿಗೆ ಕೊನೆ ದಿನವಾಗಿದೆ. ಕ್ರೀಡಾಸಕ್ತಿ ಹೊಂದಿರುವ ವಿದ್ಯಾರ್ಥಿಗಳನ್ನು ಓಟದಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು ಎಂದು ಸಿಇಒ ಹೇಳಿದರು.

ಸಭೆಯಲ್ಲಿ ಡಿವೈಎಸ್ಪಿ ಉಪಾಸೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಮಲ್ಲಿನಾಥ ಕುಸನಾಳ, ಕೋಟಿ ವೃಕ್ಷ ಅಭಿಯಾನದ ಸಂಚಾಲಕ ಡಾ. ಮುರುಗೇಶ ಪಟ್ಟಣಶೆಟ್ಟಿ, ವಿನಯ ಕಂಚ್ಯಾಣಿ, ವೀರೇಂದ್ರ ಗುಚ್ಚಟ್ಟಿ ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಅರ್ಹ ಮತದಾರರಿಗೆ ಹೆಸರು ಸೇರ್ಪಡೆ, ತಿದ್ದುಪಡಿಗೆ ಅವಕಾಶ

### ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ । ಅ.27ರಂದು ಅಂತಿಮ ಪಟ್ಟಿ ಪ್ರಕಟ । ಜಿಲ್ಲಾ ಚುನಾವಣಾಧಿಕಾರಿ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ–2026ರ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಯಿತು.

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮತದಾರರ ಪಟ್ಟಿಗೆ ಸಂಬಂಧಿಸಿದ ಹಕ್ಕು ಮತ್ತು ಆಕ್ಷೇಪಣೆಗಳ ಕುರಿತು ಮಾಹಿತಿ ನೀಡಲಾಯಿತು.

ಭಾರತ ಚುನಾವಣಾ ಆಯೋಗದ ಮಾರ್ಗದರ್ಶನದಂತೆ ಆಗಸ್ಟ್ 24ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಸೆಪ್ಟೆಂಬರ್ 23ರವರೆಗೆ ಅವಕಾಶವಿದೆ. ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದ ಅರ್ಹ ಮತದಾರರು ಹಾಗೂ ಅಕ್ಟೋಬರ್ 1, 2026ಕ್ಕೆ 18 ವರ್ಷ ಪೂರ್ಣಗೊಳ್ಳುವ ಯುವ ಮತದಾರರು ನಮೂನೆ–6ರ ಮೂಲಕ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಆನಂದ ಕೆ. ತಿಳಿಸಿದರು.

ಅರ್ಹ ಮತದಾರರು ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ನಮೂನೆ–6, 6ಎ, 7 ಮತ್ತು 8ನ್ನು ಸಲ್ಲಿಸಬಹುದಾಗಿದೆ. ಸಂಬಂಧಿಸಿದ ಮತದಾರರ ನೋಂದಣಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿ ಕಚೇರಿ ಅಥವಾ ಮತಗಟ್ಟೆ ಅಧಿಕಾರಿಗಳನ್ನು ಸಂಪರ್ಕಿಸಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಅಲ್ಲದೆ, ಭಾರತ ಚುನಾವಣಾ ಆಯೋಗದ ವೋಟರ್ ಸರ್ವಿಸ್ ಪೋರ್ಟಲ್ ಮೂಲಕವೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದೆ.

ನಮೂನೆ–6, 6ಎ, 7 ಮತ್ತು 8ರಡಿ ಸ್ವೀಕರಿಸಲಾದ ಅರ್ಜಿಗಳಿಗೆ ಸಂಬಂಧಿಸಿದಂತೆ ಮತದಾರರ ನೋಂದಣಾಧಿಕಾರಿಗಳು ನಮೂನೆ–9, 10, 11, 11ಎ ಹಾಗೂ 11ಬಿಗಳಲ್ಲಿ ಹಕ್ಕು ಮತ್ತು ಆಕ್ಷೇಪಣೆಗಳ ಪಟ್ಟಿಗಳನ್ನು ಈಗಾಗಲೇ ಸಿದ್ಧಪಡಿಸಿಪೂರೈಸಲಾಗಿದೆ. ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಈ ಪಟ್ಟಿಗಳನ್ನು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ. ಆಗಸ್ಟ್ 24ರಿಂದ ಸೆಪ್ಟೆಂಬರ್ 21ರವರೆಗೆ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 12,757 ಅರ್ಜಿಗಳು ಸ್ವೀಕೃತವಾಗಿವೆ. ಈ ಪೈಕಿ ಹೆಸರು ಸೇರ್ಪಡೆಗಾಗಿ ನಮೂನೆ–6ರಲ್ಲಿ 7,402, ನಮೂನೆ–6ಎರಲ್ಲಿ ಯಾವುದೇ ಅರ್ಜಿ ಸ್ವೀಕೃತವಾಗಿಲ್ಲ, ಹೆಸರು ಕೈಬಿಡುವಿಕೆ ಕುರಿತ ನಮೂನೆ–7ರಲ್ಲಿ 210 ಹಾಗೂ ತಿದ್ದುಪಡಿಗಾಗಿ ನಮೂನೆ–8ರಲ್ಲಿ 5,145 ಅರ್ಜಿಗಳು ಸ್ವೀಕೃತವಾಗಿವೆ.

ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 1,394, ದೇವರಹಿಪ್ಪರಗಿ ಕ್ಷೇತ್ರದಲ್ಲಿ 1,441, ಬಸವನಬಾಗೇವಾಡಿ ಕ್ಷೇತ್ರದಲ್ಲಿ 1,515, ಬಬಲೇಶ್ವರ ಕ್ಷೇತ್ರದಲ್ಲಿ 1,421, ಬಿಜಾಪುರ ನಗರ ಕ್ಷೇತ್ರದಲ್ಲಿ 1,975, ನಾಗಠಾಣ ಕ್ಷೇತ್ರದಲ್ಲಿ 2,180, ಇಂಡಿ ಕ್ಷೇತ್ರದಲ್ಲಿ 1,397 ಹಾಗೂ ಸಿಂದಗಿ ಕ್ಷೇತ್ರದಲ್ಲಿ 1,434 ಅರ್ಜಿಗಳು ಸ್ವೀಕೃತವಾಗಿವೆ.ಗಣತಿ ಫಾರ್ಮ್ಗಳು ಹಾಗೂ ಮತದಾರರ ಪಟ್ಟಿಯಲ್ಲಿನ ಮಾಹಿತಿಯಲ್ಲಿ ಹೊಂದಾಣಿಕೆಯಾಗದಿರುವುದು, ಕಾಗುಣಿತ ದೋಷಗಳು ಅಥವಾ ಮ್ಯಾಪಿಂಗ್ ಆಗದಿರುವ ಪ್ರಕರಣಗಳಿಗೆ ಸಂಬಂಧಿಸಿದ ಮತದಾರರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಈ ವಿಚಾರಣೆ ಪ್ರಕ್ರಿಯೆಯನ್ನು ಅಕ್ಟೋಬರ್ 22ರೊಳಗೆ ಪೂರ್ಣಗೊಳಿಸಲಾಗುವುದು. ಬಳಿಕ ಅಂತಿಮ ಮತದಾರರ ಪಟ್ಟಿಯನ್ನು ಅಕ್ಟೋಬರ್ 27ರಂದು ಅಧಿಕೃತವಾಗಿ ಪ್ರಕಟಿಸಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಆನಂದ ಕೆ. ಸ್ಪಷ್ಟಪಡಿಸಿದರು.

ಎಎಸ್ ಡಿಡಿಒ ಪಟ್ಟಿಯಲ್ಲಿ ಬಿಟ್ಟು ಹೋಗಿದ್ದರೆ ದಾಖಲೆ ಸಲ್ಲಿಸಿ ಅರ್ಹ ಮತದಾರರುತಮ್ಮಹೆಸರನ್ನುಮತಗಟ್ಟೆಯಲ್ಲಿ ಸೇರ್ಪಡೆಗೊಳಿಸಿಕೊಳ್ಳಬಹುದಾಗಿದೆ.

ಸಭೆಯಲ್ಲಿ ಚುನಾವಣಾ ತಹಶೀಲ್ದಾರರಾದ ಪ್ರೇಮ ಸಿಂಗ್ ಪವಾರ, ಚುನಾವಣಾ ವಿಭಾಗದ ಸಚ್ಚಿದಾನಂದ ತೇರದಾಳ ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಉಮೇಶ ಕಾರಜೋಳ, ಹಮೀದ್ ಮುಶ್ರೀಫ್, ಎಸ್ ಎಸ್ ಖಾದ್ರಿ, ಈರಣ್ಣ ಎನ್ ರಾವೂರ್, ಪ್ರಕಾಶ ಸಬರದ ಮತ್ತಿತರರು ಉಪಸ್ಥಿತರಿದ್ದರು.

## ಅಪ್ಪ ಕುಟುಂಬಕ್ಕೆ ಆಲದ ಮರವಿದ್ದಂತೆ: ನಟ ಅಶೋಕ

■ ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು: ಕುಟುಂಬದ ಉನ್ನತಿಗೆ ತನ್ನೆಲ್ಲಾ ಆಸೆ, ಆಕಾಂಕ್ಷೆ, ಸುಖ, ಸಂತೋಷ ಮೀಸಲಿರಿಸಿ ತ್ಯಾಗ ಮತ್ತು ನಿಸ್ವಾರ್ಥದ ಪ್ರತೀಕ ಅಪ್ಪ ಎಂದು ಎಂದು ಹಿರಿಯ ನಟ ಅಶೋಕ ಹೇಳಿದರು.

ನಬಿರೋಶನ್ ಪ್ರಕಾಶನ ಬೋರಗಿ, ಕೃಷ್ಣರಾಜ ಪರಿಷತ್ಮಂದಿರದಲ್ಲಿ ಹಮ್ಮಿಕೊಂಡ ಪೊಲೀಸ್ ಕಲಾಸಂಗಮ ಹಾಗೂ ಅಪ್ಪ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಬದುಕಿಗೆ ದಿನಪೂರ್ತಿ ಶ್ರಮಿಸುವ ಶ್ರಮಿಕ. ಅಪ್ಪ ತನ್ನ ಪರಿವಾರದ ಸರ್ವರಿಗೂ ನೆರಳು ನೀಡುವ ಆಲದಂತೆ ಎಂದರು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ ಮಾತನಾಡಿ, ಪೊಲೀಸ್ ಇಲಾಖೆಯಲ್ಲಿಯೂ ಸಾಕಷ್ಟು ಪ್ರತಿಭಾನ್ವಿತ ಕಲಾವಿದರಿದ್ದು ಅವರಿಗೆ ಸೂಕ್ತ ವೇದಿಕೆ ಬೇಕಿದೆ, ಕಸಾಪ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದರೆ ಆರಕ್ಷಕರಿಗೂ ಸೂಕ್ತ ವೇದಿಕೆ ನೀಡುವೆ ಎಂದರು.

ಅಪ್ಪ ರಾಜ್ಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ.ಮಹಾಂತೇಶ ಬಿರಾದಾರ ತಂದೆಯ ಹೆಸರಿನಲ್ಲಿ ನನಗೆ ಪ್ರಶಸ್ತಿ ನೀಡಿ, ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಹಲವು ಸಾಧಕರಿಗೆ ಪುರಸ್ಕಾರದೊಂದಿಗೆ ಗೌರವಿಸಿರುವ ಆರಕ್ಷಕ ಮೌಲಾಲಿಯ ನಿಸ್ವಾರ್ಥ ಸಾಮಾಜಿಕ ಸೇವೆ ಅಭಿನಂದನಾರ್ಹ. ಪ್ರಶಸ್ತಿ ಜೊತೆಗೆ ನನಗೆ ನೀಡಿರುವ ಐದು ಸಾವಿರ ನಗದು ಮೌಲಾಲಿ ಬೇವರಿನ ಹಣ. ಇದನ್ನು ಸಾಮಾಜದ ಸತ್ಕಾರ್ಯಕ್ಕಾಗಿ ಬಳಸಿಕೊಳ್ಳುತ್ತೇನೆ. ನಬಿರೋಶನ್ ಪ್ರಕಾಶನ ಸಂಸ್ಥೆ ಹೆಸರಿನಲ್ಲಿ ನಾನು ವೈಯಕ್ತಿಕವಾಗಿ ಐದು ಲಕ್ಷ ಠೇವಣಿ ನೀಡುತ್ತೇನೆ. ಬಂದ ಬಡ್ಡಿಯ ಹಣದಲ್ಲಿ ಸಂಸ್ಥೆಯು ಪ್ರತಿವರ್ಷ ಸಾಮಾಜಿಕ ಕೆಲಸಕ್ಕೆ ಬಳಸಿಕೊಳ್ಳಲಿ ಎಂದರು.

ಚಿತ್ರಸಾಹಿತ್ಯಡಾ.ವಿ.ನಾಗೇಂದ್ರಪ್ರಸಾದ್, ಎಲೆಕ್ಟ್ರಾನಿಕ್ ಸಿಟಿ ಡಿಸಿಪಿ ಎಂ.ನಾರಾಯಣ, ವಿವಿಐಪಿ ಭದ್ರತೆ ಡಿಸಿಪಿ ಡಾ.ಹೆಚ್ ಮಂಜುನಾಥ ಬಾಬು ಮಾತನಾಡಿ, ಆರಕ್ಷಕ ಮೌಲಾಲಿ ಆಲಗೂರ ತನ್ನ ತಂದೆಯ ಹೆಸರಿನಲ್ಲಿ ಪ್ರಶಸ್ತಿ ನೀಡಿ ಆರಕ್ಷಕರನ್ನು ಗೌರವಿಸುವ ಕಾರ್ಯ ಶ್ಲಾಘನೀಯ ಮತ್ತು ಅಭಿನಂದನಾರ್ಹ ಎಂದರು.

ಕನ್ನಡ ಸಾಹಿತ್ಯ ಗೆಳೆಯರ ಬಳಗ ಅಧ್ಯಕ್ಷ ರಾಜಶೇಖರ ಕೂಚಬಾಳ, ಎಸ್ ಬಿ ವಿಸ್ಡಮ್ ಕೆರಿಯರ್ ಅಕಾಡೆಮಿಯ ಶರಣಯ್ಯ ಭಂಡಾರಿಮಠ, ಮಾತನಾಡಿದರು.

ಇದೇ ವೇಳೆ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪೊಲೀಸ್ ಕಲಾವಿದರಿಂದ ಭರತನಾಟ್ಯ, ಯಕ್ಷಗಾನ, ಸಮೂಹ ಗಾಯನ ಜರುಗಿದವು. ವೇದಿಕೆ ಮೇಲೆ ಸಿದ್ಧಲಿಂಗ ಚೌಧರಿ, ಆಯೋಜಕ ಮೌಲಾಲಿ ಆಲಗೂರ, ಆರಕ್ಷಕ ತುಕಾರಾಂ ಬಾಲವ್ವಗೋಳ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

### ಡಾ.ಮಹಾಂತೇಶ ಬಿರಾದಾರ ಗೆ ಅಪ್ಪ ಪ್ರಶಸ್ತಿ ಪ್ರದಾನ । ನಬಿರೋಶನ್ ಪ್ರಕಾಶನ ಸಂಸ್ಥೆಗೆ ವೈಯಕ್ತಿಕ ರೂ. ಐದು ಲಕ್ಷ ಕೊಡುಗೆ ಘೋಷಿಸಿದ ಡಾ.ಮಹಾಂತೇಶ

# ಚಪ್ಪಲಿ ಮಾತ್ರವಲ್ಲ.. 'ಪದವಿ'ಯನ್ನೂ ಹೊರಗಿಟ್ಟು ಒಳಬನ್ನಿ!




■ ಉದಯರಶ್ಮಿ ದಿನಪತ್ರಿಕೆ

ಇತ್ತೀಚೆಗೆ ಒಂದು ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಿದ್ದೆ. ಕೆಲಸ ಮುಗಿದ ನಂತರ ಇನ್ನೂ ಸ್ವಲ್ಪ ಸಮಯವಿದ್ದುದರಿಂದ, ಹತ್ತಿರದಲ್ಲಿದ್ದ ಒಂದು ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದು ಬರೋಣ ಎಂದು ಅಲ್ಲಿಗೆ ಹೋದೆ. ದೇವಸ್ಥಾನದ ಆವರಣಕ್ಕೆ ಕಾಲಿಟ್ಟ ಕ್ಷಣವೇ ಮನಸ್ಸಿಗೆ ಒಂದು ರೀತಿಯ ನೆಮ್ಮದಿ ಆವರಿಸಿತು. ಸುತ್ತಲೂ ಸ್ವಚ್ಛತೆ, ಅಚ್ಚುಕಟ್ಟಾದ ವ್ಯವಸ್ಥೆ, ಗದ್ದಲವಿಲ್ಲದ ಪ್ರಶಾಂತ ವಾತಾವರಣ ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲೊಂದು ದೈವಿಕ ಕಳೆ ಎದ್ದು ಕಾಣುತ್ತಿತ್ತು. ನಿಧಾನವಾಗಿ ಒಳಗೆ ಪ್ರವೇಶಿಸುತ್ತಿದ್ದಾಗ ನನ್ನ ಕಣ್ಣಿಗೆ ಒಂದು ಫಲಕ ಬಿತ್ತು. ಅದರ ಮೇಲಿದ್ದ ಒಂದು ವಾಕ್ಯ ನನ್ನ ಹೆಜ್ಜೆಯನ್ನು ನಿಲ್ಲಿಸಿತು"ನಿಮ್ಮ ಚಪ್ಪಲಿ ಹಾಗೂ ಪದವಿ ಎಲ್ಲವನ್ನೂ ಇಲ್ಲೇ ಬಿಟ್ಟು ಒಳಗೆ ಬನ್ನಿ."

ಚಪ್ಪಲಿ ಹೊರಗಿಡಿ ಎನ್ನುವುದನ್ನು ನಾವು ದೇವಸ್ಥಾನಗಳಲ್ಲಿ ಸಾಮಾನ್ಯವಾಗಿ ನೋಡುತ್ತೇವೆ. ಆದರೆ "ಚಪ್ಪಲಿ ಹಾಗೂ ಪದವಿ" ಎಂಬ ಎರಡು ಪದಗಳನ್ನು ಒಂದೇ ವಾಕ್ಯದಲ್ಲಿ ಓದಿದಾಗ, ಅದರೊಳಗಿನ ಅರ್ಥ ನನ್ನ ಮನಸ್ಸನ್ನು ಬಹಳ ಹೊತ್ತು ಕಾಡಿತು. ಚಪ್ಪಲಿ ಹೊರಗಿಡುವುದು ಸುಲಭ. ಆದರೆ ಪದವಿಯನ್ನು ಹೊರಗಿಡುವುದು ಎಂದರೇನು? ಸ್ವಲ್ಪ ಯೋಚಿಸಿದಾಗ ಒಂದು ಸರಳ ಸತ್ಯ ಮನಸ್ಸಿಗೆ ಹೊಳೆಯಿತು ದೇವಸ್ಥಾನಕ್ಕೆ ಹೋದಾಗ ನಾವು ನಮ್ಮ ಹುದ್ದೆ, ಪ್ರಶಸ್ತಿ, ಹಣ, ಆಸ್ತಿ, ಅಂತಸ್ತು, ಅಧಿಕಾರ ಯಾವುದನ್ನೂ ತೋರಿಸಿಕೊಳ್ಳಲು ಹೋಗುವುದಿಲ್ಲ; ನಾವು ಅಲ್ಲಿಗೆ ಹೋಗಬೇಕಾಗಿರುವುದು ಕೇವಲ ಒಬ್ಬ ಭಕ್ತನಾಗಿ.

ನಾವು ದೇವಸ್ಥಾನಕ್ಕೆ ಹೋದಾಗ, "ನಾನು ಇಂತಹ ಪದವಿ ಪಡೆದಿದ್ದೇನೆ, ಇಷ್ಟು ಪ್ರಶಸ್ತಿಗಳನ್ನು ಪಡೆದಿದ್ದೇನೆ, ನನ್ನ ಬಳಿ ಇಷ್ಟು ಹಣವಿದೆ, ನನಗೆ ಇಷ್ಟು ಅಂತಸ್ತು ಇದೆ, ಸಮಾಜದಲ್ಲಿ ನನಗೆ ಇಷ್ಟು ಗೌರವವಿದೆ" ಎಂದು ದೇವರ ಮುಂದೆ ಹೇಳಿಕೊಳ್ಳುವ ಅಗತ್ಯವೇನು? ದೇವರಿಗೆ ನಮ್ಮ ಪರಿಚಯ ಪತ್ರ ಬೇಕಿಲ್ಲ. ದೇವರ ಮುಂದೆ ದೊಡ್ಡವನು ಚಿಕ್ಕವನು ಎಂಬ ವ್ಯತ್ಯಾಸವೂ ಇಲ್ಲ. ನಮ್ಮ ಹುದ್ದೆಗಿಂತ ನಮ್ಮ ಹೃದಯವೇ ಮುಖ್ಯ.

ಆದರೆ ಬದುಕಿನಲ್ಲಿ ನಾವು ಪದವಿಗೆ ಎಷ್ಟು ಮಹತ್ವ ಕೊಡುತ್ತೇವೆ! ಒಂದು ಹುದ್ದೆ ಸಿಕ್ಕರೆ ಮಾತನಾಡುವ ಧಾಟಿ ಬದಲಾಗುತ್ತದೆ. ಅಧಿಕಾರ ಬಂದರೆ ನಮ್ಮ ಸುತ್ತಲಿನವರನ್ನು ನೋಡುವ ದೃಷ್ಟಿ ಬದಲಾಗುತ್ತದೆ. ಕೆಲವೊಮ್ಮೆ ನಿನ್ನೆ ನಮ್ಮೊಂದಿಗೆ ಸಮಾನವಾಗಿ ಕುಳಿತಿದ್ದ ವ್ಯಕ್ತಿಯನ್ನೇ ಇಂದು ನಮ್ಮ ಹುದ್ದೆಯ ಕಾರಣದಿಂದ ದೂರ ಇಡುತ್ತೇವೆ. ಆದರೆ ಒಂದು ಸತ್ಯವನ್ನು ಮರೆಯುತ್ತೇವೆ ಹುದ್ದೆ ಶಾಶ್ವತವಲ್ಲ. ಕುರ್ಚಿ ಶಾಶ್ವತವಲ್ಲ. ಅಧಿಕಾರವೂ ಶಾಶ್ವತವಲ್ಲ.

ಇಂದು ನಾವು ಕುಳಿತಿರುವ ಕುರ್ಚಿಯಲ್ಲಿ ನಾಳೆ ಮತ್ತೊಬ್ಬರು ಕುಳಿತುಕೊಳ್ಳುತ್ತಾರೆ. ಇಂದು ನಮ್ಮ ಹೆಸರಿನ ಮುಂದೆ ಇರುವ ಪ್ರಶಸ್ತಿ ನಾಳೆ ಯಾರಿಗೂ ನೆನಪಿರದೇ ಹೋಗಬಹುದು. ಹಣ ಬರಬಹುದು, ಹೋಗಬಹುದು. ಆದರೆ ನಾವು ಇತರರೊಂದಿಗೆ ಹೇಗೆ ನಡೆದುಕೊಂಡೆವು ಎಂಬುದು ಮಾತ್ರ ಅವರ ಮನಸ್ಸಿನಲ್ಲಿ ಉಳಿಯುತ್ತದೆ.

ನನಗೆ ಬಹಳ ನಿಜವಾಗಿ ಅನಿಸುವ ಒಂದು ಮಾತಿದೆ ಪದವಿ ಇದ್ದಾಗ ನಮ್ಮನ್ನು ಗೌರವಿಸುವವರು ಹಲವರಿರುತ್ತಾರೆ; ಪದವಿ ಇಲ್ಲದಾಗಲೂ ನಮ್ಮನ್ನು ಗೌರವಿಸುವವರು ಮಾತ್ರ ನಮ್ಮನ್ನು ನಿಜವಾಗಿ ಗೌರವಿಸಿದವರು. ಅಧಿಕಾರ ಇರುವವರೆಗೆ ಸುತ್ತಲೂ ಜನರಿರಬಹುದು. ಆದರೆ ಅಧಿಕಾರ ಹೋದ ಮೇಲೂ ಒಂದು ಕರೆ ಮಾಡಿ, "ಹೇಗಿದ್ದೀರಿ?" ಎಂದು ಆತ್ಮೀಯವಾಗಿ ಕೇಳುವವರು ಇದ್ದರೆ, ಅದು ಹುದ್ದೆಯಿಂದ ಬಂದ ಸಂಬಂಧವಲ್ಲ; ಹೃದಯದಿಂದ ಬಂದ ಸಂಬಂಧ.

ಇದೇ ಮಾತು ಗುರುವಿನ ಬಳಿಗೂ ಅನ್ವಯಿಸುತ್ತದೆ. ಗುರುವಿನ ಬಳಿ ಹೋದಾಗಲೂ ನಮ್ಮ ಪದವಿ, ಪ್ರಶಸ್ತಿ, ಹಣ, ಅಂತಸ್ತುಗಳನ್ನೆಲ್ಲ ಮುಂದಿಟ್ಟುಕೊಂಡು ಹೋಗಬಾರದು. "ನಾನು ಇಷ್ಟು ಓದಿದ್ದೇನೆ, ಇಷ್ಟು ಸಾಧಿಸಿದ್ದೇನೆ, ಇಷ್ಟು ಪ್ರಶಸ್ತಿಗಳನ್ನು ಪಡೆದಿದ್ದೇನೆ" ಎಂದು ಹೇಳುವುದಕ್ಕಿಂತ, "ನನಗೆ ಇನ್ನೂ ಕಲಿಯಬೇಕಿದೆ" ಎಂಬ ಮನಸ್ಸಿನಿಂದ ಗುರುವಿನ ಮುಂದೆ ಕುಳಿತಾಗ ಮಾತ್ರ ಜ್ಞಾನ ನಮ್ಮೊಳಗೆ ಇಳಿಯುತ್ತದೆ.

ತುಂಬಿದ ಪಾತ್ರೆಗೆ ಹೊಸದಾಗಿ ಏನನ್ನೂ ತುಂಬಲು ಸಾಧ್ಯವಿಲ್ಲ. ಹಾಗೆಯೇ "ನನಗೆ ಎಲ್ಲವೂ ಗೊತ್ತು" ಎನ್ನುವ ಅಹಂಕಾರ ತುಂಬಿದ ಮನಸ್ಸಿಗೆ ಹೊಸ ಜ್ಞಾನಕ್ಕೆ ಜಾಗವಿರುವುದಿಲ್ಲ. ಎಷ್ಟೇ ದೊಡ್ಡ ಪದವಿಯಲ್ಲಿದ್ದರೂ ಗುರುವಿನ ಮುಂದೆ ಶಿಷ್ಯನೇ. ಎಷ್ಟೇ ಪ್ರಶಸ್ತಿಗಳನ್ನು ಪಡೆದಿದ್ದರೂ ಕಲಿಯಬೇಕಾದದ್ದು ಇನ್ನೂ ಇರುತ್ತದೆ. ಪದವಿ ಜಗತ್ತಿನ ಮುಂದೆ ನಮ್ಮ ಪರಿಚಯವಾಗಬಹುದು; ಆದರೆ ಗುರುವಿನ ಮುಂದೆ ನಮ್ಮ ವಿನಯವೇ ನಮ್ಮ ನಿಜವಾದ ಪರಿಚಯ.

ನಮ್ಮ ಶಿಕ್ಷಕರ ಬದುಕಿನಲ್ಲೂ ಇದು ನಿಜ. ತರಗತಿಯಲ್ಲಿ ಶಿಕ್ಷಕನಿಗೆ ಒಂದು ಸ್ಥಾನವಿದೆ. ವಿದ್ಯಾರ್ಥಿಗಳು ಗೌರವಿಸುತ್ತಾರೆ. ಆದರೆ ತರಗತಿಯ ಹೊರಗೆ ಒಬ್ಬ ವಿದ್ಯಾರ್ಥಿ ತನ್ನ ಸಮಸ್ಯೆಯನ್ನು ಹೇಳಿಕೊಂಡಾಗ, "ನಾನು ಶಿಕ್ಷಕ, ನೀನು ವಿದ್ಯಾರ್ಥಿ" ಎನ್ನುವ ಅಂತರವನ್ನು ಸ್ವಲ್ಪ ಬದಿಗಿಟ್ಟು ಅವನ ಮಾತನ್ನು ಕೇಳಲು ಸಾಧ್ಯವಾದಾಗ ಶಿಕ್ಷಕನ ನಿಜವಾದ ದೊಡ್ಡತನ ಕಾಣಿಸುತ್ತದೆ. ಜ್ಞಾನ ಕೊಡುವುದು ಶಿಕ್ಷಕನ ಕರ್ತವ್ಯ; ವಿದ್ಯಾರ್ಥಿಯ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಶಿಕ್ಷಕನ ಮಾನವೀಯತೆ.

ಹಾಗೆಯೇ ಮನೆಯಲ್ಲೂ ನಾವು ನಮ್ಮ ನಮ್ಮ ಪದವಿಗಳನ್ನು ಹೊತ್ತುಕೊಂಡೇ ಬದುಕುತ್ತೇವೆ ತಂದೆ, ತಾಯಿ, ಗಂಡ, ಹೆಂಡತಿ, ಹಿರಿಯ, ಕಿರಿಯ ಆದರೆ ಸಂಬಂಧಗಳು ಪದವಿಯಿಂದ ಉಳಿಯುವುದಿಲ್ಲ. ಪ್ರೀತಿಯಿಂದ, ಗೌರವದಿಂದ, ಪರಸ್ಪರ ಅರ್ಥಮಾಡಿಕೊಳ್ಳುವಿಕೆಯಿಂದ ಉಳಿಯುತ್ತವೆ.

ಆ ದೇವಸ್ಥಾನದ ಬಾಗಿಲ ಬಳಿ ಕಂಡ ಆ ಒಂದು ಸಾಲು ಈಗ ನನಗೆ ಕೇವಲ ಒಂದು ಫಲಕದ ಮಾತಾಗಿ ಕಾಣುವುದಿಲ್ಲ. ಅದು ನನ್ನನ್ನೇ ನನಗೆ ತೋರಿಸಿದ ಕನ್ನಡಿಯಂತೆ ಕಾಣುತ್ತದೆ.

ದೇವಸ್ಥಾನಕ್ಕೆ ಹೋಗುವಾಗ ಚಪ್ಪಲಿ ಹೊರಗಿಡುತ್ತೇವೆ. ಆದರೆ ಅಹಂಕಾರವನ್ನು ಹೊರಗಿಡುತ್ತೇವೆಯೇ?ಪದವಿಯನ್ನು ಹೊರಗಿಡುತ್ತೇವೆ. ಆದರೆ "ನಾನು" ಎನ್ನುವ ಭಾವವನ್ನು ಹೊರಗಿಡುತ್ತೇವೆಯೇ?

ಪ್ರಶಸ್ತಿಗಳನ್ನು ಹೊರಗಿಡುತ್ತೇವೆ. ಆದರೆ ನಮ್ಮ ಸಾಧನೆಯ ಗರ್ವವನ್ನು ಹೊರಗಿಡುತ್ತೇವೆಯೇ?


ಬಹುಶಃ ದೇವರ ಮುಂದೆ ನಾವು ತೆಗೆದುಕೊಂಡು ಹೋಗಬೇಕಾದದ್ದು ಇಷ್ಟೇ ಒಂದು ಸರಳ ಮನಸ್ಸು, ಸ್ವಲ್ಪ ವಿನಯ ಮತ್ತು ನಿಜವಾದ ಭಕ್ತಿ.

ದೇವಸ್ಥಾನಕ್ಕೆ ಹೋದಾಗ ಭಕ್ತನಾಗಿ ಹೋಗೋಣ. ಗುರುವಿನ ಬಳಿಗೆ ಹೋದಾಗ ಶಿಷ್ಯನಾಗಿ ಹೋಗೋಣ. ಹಿರಿಯರ ಮುಂದೆ ವಿನಯದಿಂದ ನಿಲ್ಲೋಣ. ಸಾಮಾನ್ಯ ಮನುಷ್ಯನ ಮುಂದೆ ಮನುಷ್ಯನಾಗಿ ನಿಲ್ಲೋಣ.

ಆ ಒಂದು ವಾಕ್ಯ ನನಗೆ ಒಂದು ದೊಡ್ಡ ಪಾಠ ಕಲಿಸಿತುದೇವರ ಮುಂದೆ ನಮ್ಮ ಪರಿಚಯ ನಮ್ಮ ಪದವಿಯಲ್ಲ, ನಮ್ಮ ಭಕ್ತಿ. ಗುರುವಿನ ಮುಂದೆ ನಮ್ಮ ಪರಿಚಯ ನಮ್ಮ ಸಾಧನೆಯಲ್ಲ, ಕಲಿಯುವ ಮನಸ್ಸು. ಮನುಷ್ಯರ ಮುಂದೆ ನಮ್ಮ ಪರಿಚಯ ನಮ್ಮ ಅಂತಸ್ತಲ್ಲ, ನಮ್ಮ ನಡೆನುಡಿ.

ದೇವಸ್ಥಾನದ ಬಾಗಿಲಲ್ಲಿ ಚಪ್ಪಲಿ ಬಿಚ್ಚುವುದು ಒಂದು ಆಚರಣೆ. ಆದರೆ 'ನಾನು' ಎನ್ನುವ ಅಹಂಕಾರವನ್ನು ಬಿಚ್ಚಿಡುವುದು ನಿಜವಾದ ಭಕ್ತಿ.

ಕೊನೆಗೆ ಬದುಕು ನಮಗೆ ಎಷ್ಟೇ ಎತ್ತರದ ಸ್ಥಾನ ನೀಡಲಿ, ಆ ಎತ್ತರ ನಮ್ಮ ತಲೆ ಎತ್ತಿಸುವುದಕ್ಕಿಂತ ತಲೆ ಬಾಗಿಸುವ ವಿನಯವನ್ನು ಕಲಿಸಿದಾಗಲೇ ಅದರ ಅರ್ಥ ಸಾರ್ಥಕವಾಗುತ್ತದೆ.




ಚಪ್ಪಲಿ ಹೊರಗಿಟ್ಟರೆ ದೇವಸ್ಥಾನದ ಒಳಗೆ ಪ್ರವೇಶಿಸಬಹುದು;


ಆದರೆ ಅಹಂಕಾರವನ್ನು ಹೊರಗಿಟ್ಟಾಗ ಮಾತ್ರ ದೇವರ ಸನ್ನಿಧಿಗೆ ನಿಜವಾಗಿ ಪ್ರವೇಶಿಸಬಹುದು.

ಏಕೆಂದರೆಪದವಿನಮಗೆಸ್ಥಾನಕೊಡಬಹುದು; ವಿನಯ ಮಾತ್ರ ಗೌರವ ಕೊಡುತ್ತದೆ. ಹಣ ನಮ್ಮ ಸುತ್ತ ಜನರನ್ನು ಸೇರಿಸಬಹುದು; ಮಾನವೀಯತೆ ಮಾತ್ರ ಅವರನ್ನು ನಮ್ಮೊಂದಿಗೆ ಉಳಿಸುತ್ತದೆ.


ಆ ದಿನ ದೇವಸ್ಥಾನದಿಂದ ಹೊರಬರುವಾಗ ಆ ಫಲಕದ ಮಾತು ಮತ್ತೆ ಮತ್ತೆ ನೆನಪಾಯಿತು"ನಿಮ್ಮ ಚಪ್ಪಲಿ ಹಾಗೂ ಪದವಿ ಎಲ್ಲವನ್ನೂ ಇಲ್ಲೇ ಬಿಟ್ಟು ಒಳಗೆ ಬನ್ನಿ."

ಮುಂದೆ ದೇವಸ್ಥಾನದ ಮೆಟ್ಟಿಲು ಹತ್ತುವಾಗ ಚಪ್ಪಲಿ ಬಿಚ್ಚುವ ಜೊತೆಗೆ ನಮ್ಮೊಳಗಿನ 'ನಾನು' ವನ್ನೂ ಸ್ವಲ್ಪ ಬದಿಗಿಡೋಣ.

**ದೇವರ ಮುಂದೆ ಭಕ್ತರಾಗೋಣ..**
**ಗುರುವಿನ ಮುಂದೆ ಶಿಷ್ಯರಾಗೋಣ..**
**ಮನುಷ್ಯರ ಮುಂದೆ ಮನುಷ್ಯರಾಗೋಣ.**
**ಅದೇ ಬಹುಶಃ ಜೀವನದ ನಿಜವಾದ ದೊಡ್ಡತನ.**







## "ಪ್ರಶಾಂತ ಪಥ" ಅಂಕಣ ಕುರಿತು ಒಂದಷ್ಟು..

ಮಾನ್ಯ ಓದುಗ ಬಂಧುಗಳೆ..

'ಪ್ರಶಾಂತ ಪಥ' ಬದುಕಿನ ದಾರಿಯಲ್ಲಿ ಮನಸ್ಸುಗಳೊಂದಿಗೆ ನಡೆಯುವ ಒಂದು ಸಣ್ಣ ಪ್ರಯತ್ನ. ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿಯೂ ಹೇಳಲಾಗದ ಕೆಲವು ಕಥೆಗಳಿರುತ್ತವೆ. ಯಾರಿಗೂ ಹೇಳದೆ ಕಣ್ಣೀರಿಟ್ಟ ಕ್ಷಣಗಳಿರುತ್ತವೆ. ಯಾರಿಗೂ ಕಾಣದ ನೋವುಗಳಿರುತ್ತವೆ. ಅದೇ ಸಮಯದಲ್ಲಿ, ಯಾರಿಗೂ ಹೇಳಿಕೊಳ್ಳದ ಸಣ್ಣ ಸಣ್ಣ ಸಂತೋಷಗಳೂ ಇರುತ್ತವೆ. ಹೊರಗಿನಿಂದ ನೋಡಿದಾಗ ಎಲ್ಲವೂ ಚೆನ್ನಾಗಿಯೇ ಕಾಣಬಹುದು; ಆದರೆ ಪ್ರತಿಯೊಂದು ಮನಸ್ಸಿನೊಳಗೂ ಒಂದು ಪ್ರಪಂಚವೇ ಅಡಗಿರುತ್ತದೆ.

ಆ ಮನಸ್ಸುಗಳೊಂದಿಗೆ ಒಂದಿಷ್ಟು ಮಾತನಾಡಬೇಕು, ಬದುಕಿನ ದಾರಿಯಲ್ಲಿ ಜೊತೆಯಾಗಿ ಒಂದಿಷ್ಟು ದೂರ ನಡೆಯಬೇಕು ಎಂಬ ಹಂಬಲದಿಂದ ಹುಟ್ಟಿಕೊಂಡದ್ದೇ "ಪ್ರಶಾಂತ ಪಥ."

ಕೆಲವೊಮ್ಮೆ ಒಂದು ಮಾತು ನಮ್ಮ ನೋವನ್ನು ಕಡಿಮೆ ಮಾಡುತ್ತದೆ. ಒಂದು ಸಾಲು ನಮ್ಮಲ್ಲಿ ಹೊಸ ಭರವಸೆ ಮೂಡಿಸುತ್ತದೆ. ಒಂದು ಘಟನೆ ನಮ್ಮ ಬದುಕಿನ ಬಗ್ಗೆ ಮತ್ತೊಮ್ಮೆ ಯೋಚಿಸುವಂತೆ ಮಾಡುತ್ತದೆ. ಒಂದು ಅಪರಿಚಿತನ ಅನುಭವವೂ ನಮ್ಮ ಬದುಕಿಗೆ ದಾರಿದೀಪವಾಗಬಹುದು. ಅಂತಹ ಒಂದು ಮಾತು, ಒಂದು ಚಿಂತನೆ, ಒಂದು ಅನುಭವ ಯಾರಾದರೂ ಒಬ್ಬರ ಬದುಕಿಗೆ ಉಪಯೋಗವಾಗಲಿ ಎಂಬುದೇ "ಪ್ರಶಾಂತ ಪಥ"ದ ಮೊದಲ ಉದ್ದೇಶ.

ಇಲ್ಲಿ ಶಿಕ್ಷಣದ ಬಗ್ಗೆ, ಮಕ್ಕಳ ಕನಸುಗಳ ಬಗ್ಗೆ, ಪೋಷಕರ ನಿರೀಕ್ಷೆಗಳ ಬಗ್ಗೆ, ಶಿಕ್ಷಕರ ಜವಾಬ್ದಾರಿಯ ಬಗ್ಗೆ ಮಾತನಾಡೋಣ. ಸಂಬಂಧಗಳ ಬೆಲೆ ಅರಿಯೋಣ. ಸಂಸ್ಕೃತಿಯ ಬೇರುಗಳನ್ನು ನೆನಪಿಸಿಕೊಳ್ಳೋಣ. ಯುವಜನತೆಯ ಕನಸು ಮತ್ತು ಸವಾಲುಗಳ ಕುರಿತು ಚಿಂತಿಸೋಣ. ಸಮಾಜದ ಬದಲಾವಣೆಗಳನ್ನು ಗಮನಿಸೋಣ. ಮನುಷ್ಯತ್ವದ ಅರ್ಥವನ್ನು ಹುಡುಕೋಣ. ಜೊತೆಗೆ, ನಮ್ಮೊಳಗೆ ನಾವೇ ಒಮ್ಮೆ ನೋಡಿಕೊಳ್ಳುವ ಪ್ರಯತ್ನ ಮಾಡೋಣ.

ಈ ಅಂಕಣದ ಮೂಲಕ ಓದುಗರನ್ನು ಕೇವಲ ಓದುಗರಾಗಿ ನೋಡದೆ, ಈ ಪಯಣದ ಸಹಪಯಣಿಕರಾಗಿ ನೋಡಲು ಬಯಸುತ್ತೇನೆ. ನಿಮ್ಮ ಬದುಕಿನಲ್ಲಿ ನಡೆದ ಒಂದು ಘಟನೆ, ನಿಮ್ಮ ಮನಸ್ಸಿನಲ್ಲಿ ಮೂಡಿದ ಒಂದು ಪ್ರಶ್ನೆ, ನೀವು ಕಂಡ ಒಂದು ಬದಲಾವಣೆ, ನಿಮ್ಮನ್ನು ಕಾಡಿದ ಒಂದು ಸಾಮಾಜಿಕ ವಿಚಾರ, ನಿಮ್ಮ ಅನುಭವದಿಂದ ಕಲಿತ ಒಂದು ಜೀವನಪಾಠಇವೆಲ್ಲವೂ "ಪ್ರಶಾಂತ ಪಥ"ದ ಮುಂದಿನ ಹೆಜ್ಜೆಗಳಿಗೆ ದಾರಿಯಾಗಬಹುದು.

ಆದ್ದರಿಂದ ಈ ಪಥಕ್ಕೆ ಬಾಗಿಲು ತೆರೆದಿದೆ. ಇದು ಒಬ್ಬನ ಧ್ವನಿಯಾಗದೆ, ಅನೇಕ ಮನಸ್ಸುಗಳ ಪ್ರತಿಧ್ವನಿಯಾಗಲಿ ಎಂಬುದು ನನ್ನ ಆಶಯ.

ಯಾರಾದರೂ ನಿರಾಶೆಯಲ್ಲಿದ್ದಾಗ ಒಂದು ಭರವಸೆ ಸಿಕ್ಕರೆ
ಯಾರಾದರೂ ತಪ್ಪು ದಾರಿಯಲ್ಲಿ ಸಾಗುತ್ತಿದ್ದಾಗ ಒಂದು ಚಿಂತನೆ ಮೂಡಿದರೆ
ಯಾರಾದರೂ ಸಂಬಂಧದ ಬೆಲೆ ಅರಿತುಕೊಂಡರೆ
ಯಾರಾದರೂ ಪುಸ್ತಕದ ಕಡೆಗೆ ಮರಳಿದರೆ
ಯಾರಾದರೂ ಮತ್ತೊಬ್ಬರ ಕಣ್ಣೀರನ್ನು ಒರೆಸಲು ಕೈ ಚಾಚಿದರೆ
ಆ ಕ್ಷಣವೇ "ಪ್ರಶಾಂತ ಪಥ"ದ ಸಾರ್ಥಕತೆ.
ನಿಮ್ಮ ಬದುಕಿನೊಂದಿಗೆ ನನ್ನ ಬದುಕನ್ನು ಬೆಸೆದುಕೊಳ್ಳಲು
ಪ್ರತಿ ವಾರ ನಿಮ್ಮ ಮುಂದೆ ಬರುತ್ತೇನೆ.
ನಾನು ಮಾತ್ರ ನಡೆಯುವುದಲ್ಲ, ಒಟ್ಟಾಗಿ ಒಂದಿಷ್ಟು ದೂರ ನಡೆಯೋಣ.
ಒಂದಿಷ್ಟು ಚಿಂತಿಸೋಣ.





ಒಂದಿಷ್ಟು ಬದಲಾಗೋಣ.
ಮತ್ತೊಬ್ಬರ ಬದುಕಿನಲ್ಲಿ ಒಂದಿಷ್ಟು ಬೆಳಕಾಗೋಣ.
ಇದು "ಪ್ರಶಾಂತ ಪಥ"
ಬದುಕನ್ನು ನೋಡುವ ಒಂದು ಸರಳ ಪ್ರಯತ್ನ
ಮನಸ್ಸುಗಳನ್ನು ಮುಟ್ಟುವ ಒಂದು ಆತ್ಮೀಯ ಪಯಣ
ನನ್ನ ಹೆಸರಿನಲ್ಲಿ ಆರಂಭವಾದರೂ, ನಮ್ಮೆಲ್ಲರಿಗಾಗಿ ಸಾಗುವ ಒಂದು ಪಥ..
"ಪ್ರಶಾಂತ ಪಥ"

■ - ಪ್ರಶಾಂತ ಚಿದಂಬರ ಕುಲಕರ್ಣಿ

ಉಪನ್ಯಾಸಕರು

## ಸಂಪಾದಕರಿಗೆ ಲೇಖಕರಿಂದ ಕೃತಜ್ಞತೆಯೋಲೆ



ಮಾನ್ಯ ಸಂಪಾದಕರಾದ ಇಂದುಶೇಖರ ಸರ್..

ಒಬ್ಬ ಬರಹಗಾರನಿಗೆ ತನ್ನ ಮನಸ್ಸಿನ ಮಾತುಗಳನ್ನು ಅಕ್ಷರಗಳ ರೂಪದಲ್ಲಿ ಬರೆಯುವುದು ಎಷ್ಟು ಸಂತೋಷದ ಸಂಗತಿಯೋ, ಅದಕ್ಕಿಂತಲೂ ಅವುಗಳನ್ನು ಓದಿ, ಅರ್ಥಮಾಡಿಕೊಂಡು, "ಈ ಬರಹಗಳು ಇನ್ನಷ್ಟು ಜನರನ್ನು ತಲುಪಬೇಕು" ಎಂದು ಭಾವಿಸಿ ಪ್ರಕಟಿಸಲು ಅವಕಾಶ ನೀಡುವುದು ಅದಕ್ಕಿಂತ ದೊಡ್ಡ ಪ್ರೋತ್ಸಾಹ.

ನನ್ನ ಬರಹಗಳನ್ನು ಓದಿ, ಅವುಗಳಲ್ಲಿನ ವಿಚಾರಗಳನ್ನು ಮೆಚ್ಚಿ, ನನ್ನ ಮೇಲೆ ವಿಶ್ವಾಸವಿಟ್ಟು "ಪ್ರಶಾಂತ ಪಥ" ಎಂಬ ಲೇಖನ ಮಾಲಿಕೆಯನ್ನು ಪ್ರತಿ ವಾರವೂ "ಉದಯರಶ್ಮಿ" ದಿನಪತ್ರಿಕೆಯಲ್ಲಿ ಪ್ರಕಟಿಸಲು ಅವಕಾಶ ಕಲ್ಪಿಸಿರುವ ಪತ್ರಿಕೆಯ ಸಂಪಾದಕರಾದ ಶ್ರೀ ಇಂದುಶೇಖರ ಮಣುರ ಸರ್ ಅವರಿಗೆ ನನ್ನ ಹೃದಯದಾಳದ ಕೃತಜ್ಞತೆಗಳು.

ಸರ್, ನೀವು ನೀಡಿರುವುದು ಕೇವಲ ಒಂದು ಅಂಕಣ ಬರೆಯುವ ಅವಕಾಶವಲ್ಲ. ನನ್ನ ಅಕ್ಷರಗಳಿಗೆ ಒಂದು ವೇದಿಕೆ, ನನ್ನ ಆಲೋಚನೆಗಳಿಗೆ ಒಂದು ವಿಳಾಸ, ನನ್ನ ಬರಹಗಳಿಗೆ ಓದುಗರ ಮನಸ್ಸಿನವರೆಗೆ ತಲುಪುವ ಒಂದು ದಾರಿ ನೀಡಿದ್ದೀರಿ.

ಬರೆಯುವ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ತನ್ನ ಮಾತು ಯಾರಿಗಾದರೂ ತಲುಪಬೇಕು, ತನ್ನ ಒಂದು ಸಾಲಾದರೂ ಯಾರದೋ ಮನಸ್ಸನ್ನು ಮುಟ್ಟಬೇಕು, ತನ್ನ ಒಂದು ಚಿಂತನೆಯಾದರೂ ಯಾರದೋ ಬದುಕಿನಲ್ಲಿ ಬೆಳಕಾಗಬೇಕು ಎಂಬ ಸಣ್ಣ ಆಸೆ ಇರುತ್ತದೆ. ಆ ಆಸೆಗೆ ನೀವು ಇಂದು ಒಂದು ಸುಂದರ ಅವಕಾಶವನ್ನು ನೀಡಿದ್ದೀರಿ.

ನನ್ನ ಬರಹಗಳನ್ನು ಕೇವಲ ಅಕ್ಷರಗಳಾಗಿ ನೋಡದೆ, ಅದರ ಹಿಂದಿರುವ ಭಾವನೆಗಳನ್ನು ಮತ್ತು ಚಿಂತನೆಗಳನ್ನು ಗುರುತಿಸಿ ಪ್ರೋತ್ಸಾಹಿಸಿದ ನಿಮ್ಮ ಮನಸ್ಸಿಗೆ ನಾನು ಸದಾ ಋಣಿಯಾಗಿರುತ್ತೇನೆ. ಒಬ್ಬ ಬರಹಗಾರನಿಗೆ ಸಂಪಾದಕರ ಮೆಚ್ಚುಗೆಯ ಮಾತು ಎಷ್ಟು ಮುಖ್ಯವೋ, ಅದಕ್ಕಿಂತಲೂ ಮುಖ್ಯವಾದದ್ದು "ನೀವು ಬರೆಯಿರಿ ನಿಮ್ಮ ಮಾತುಗಳನ್ನು ಓದುಗರಿಗೆ ತಲುಪಿಸುತ್ತೇವೆ" ಎಂಬ ವಿಶ್ವಾಸ. ಆ ವಿಶ್ವಾಸವನ್ನು ನೀವು ನನ್ನ ಮೇಲೆ ಇಟ್ಟಿದ್ದೀರಿ. ಅದು ನನ್ನಲ್ಲಿ ಸಂತೋಷವನ್ನು ಮಾತ್ರವಲ್ಲ, ಇನ್ನಷ್ಟು ಜವಾಬ್ದಾರಿಯನ್ನು ಮೂಡಿಸಿದೆ. "ಉದಯರಶ್ಮಿ"ಯ ಪುಟಗಳಲ್ಲಿ "ಪ್ರಶಾಂತ ಪಥ"ದ ಮೊದಲ ಹೆಜ್ಜೆ ಇಡುತ್ತಿರುವ ಈ ಕ್ಷಣ ನನ್ನ ಪಾಲಿಗೆ ಕೇವಲ ಬರವಣಿಗೆಯ ಹೊಸ ಅಧ್ಯಾಯವಲ್ಲ; ನನ್ನ ಅಕ್ಷರಗಳ ಬದುಕಿನಲ್ಲಿ ಮರೆಯಲಾಗದ ಒಂದು ಭಾವನಾತ್ಮಕ ಕ್ಷಣ.

ಇನ್ನು ಮುಂದೆ ನಾನು ಬರೆಯುವ ಪ್ರತಿಯೊಂದು ಸಾಲಿನ ಹಿಂದೆಯೂ ನಿಮ್ಮ ವಿಶ್ವಾಸ ಇರುತ್ತದೆ. ಆ ವಿಶ್ವಾಸಕ್ಕೆ ಧಕ್ಕೆಯಾಗದಂತೆ, ಓದುಗರ ಸಮಯಕ್ಕೆ ಗೌರವ ನೀಡುವಂತೆ, ಸಮಾಜಕ್ಕೆ ಉಪಯುಕ್ತವಾಗುವಂತೆ, ಮನಸ್ಸಿಗೆ ಹತ್ತಿರವಾಗುವಂತೆ ಬರೆಯುವುದು ನನ್ನ ಜವಾಬ್ದಾರಿ.

ಸರ್, ನೀವು ತೆರೆದಿರುವ ಈ ಬಾಗಿಲು ನನಗೆ ಒಂದು ಅವಕಾಶ ಮಾತ್ರವಲ್ಲ ಒಂದು ಪ್ರೇರಣೆ. ನೀವು ನೀಡಿರುವ ಈ ವೇದಿಕೆ ನನಗೆ ಒಂದು ಗೌರವ ಮಾತ್ರವಲ್ಲಒಂದು ಹೊಣೆಗಾರಿಕೆ. ನನ್ನ ಅಕ್ಷರಗಳ ಪಯಣಕ್ಕೆ ನೀವು ನೀಡಿದ ಈ ಬೆಂಬಲವನ್ನು ನಾನು ಎಂದಿಗೂ ಮರೆಯಲಾರೆ.

ಹೃದಯಪೂರ್ವಕ ಧನ್ಯವಾದಗಳು ಸರ್..
ನಿಮ್ಮ ಪ್ರೋತ್ಸಾಹವೇ ನನ್ನ ಬರಹಕ್ಕೆ ಬಲ.
ನಿಮ್ಮ ವಿಶ್ವಾಸವೇ "ಪ್ರಶಾಂತ ಪಥ"ದ ಮೊದಲ ಹೆಜ್ಜೆ.
ತಮ್ಮವ..

■ - ಪ್ರಶಾಂತ ಚಿದಂಬರ ಕುಲಕರ್ಣಿ

## ರಾಜಿಸಂಧಾನದಿಂದ ಹಣ-ಸಮಯ ಉಳಿತಾಯ :ನ್ಯಾ.ಹರೀಶ ಎ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾದ್ಯಂತ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ಗೆ ಕಕ್ಷಿದಾರರಿಂದ ಅಭೂತಪೂರ್ವ ಸ್ಪಂದನೆ ದೊರೆತಿದ್ದು, ಒಟ್ಟು 10,925 ಪ್ರಕರಣಗಳು ರಾಜಿ ಸಂಧಾನದ ಮೂಲಕ ಯಶಸ್ವಿಯಾಗಿ ಇತ್ಯರ್ಥಗೊಂಡವು.

ಆಸ್ತಿ ವಿಭಾಗ, ಚೆಕ್ ಬೌನ್ಸ್, ಮೋಟಾರು ವಾಹನ ಅಪಘಾತ ಪರಿಹಾರ, ಜೀವನಾಂಶ ಕೋರಿದ ಪ್ರಕರಣಗಳು, ರಾಜಿ ಮಾಡಿಕೊಳ್ಳಬಹುದಾದ ಕ್ರಿಮಿನಲ್ ಪ್ರಕರಣಗಳು ಹಾಗೂ ಅಮಲ್ದಾರಿ ಪ್ರಕರಣಗಳು ಲೋಕ್ ಅದಾಲತ್‌ನಲ್ಲಿ ಯಶಸ್ವಿಯಾಗಿ ಇತ್ಯರ್ಥಗೊಂಡವು.

ಒಂದಾದ 7 ಜೋಡಿಗಳು: ವಿಜಯಪುರ ಜಿಲ್ಲೆ ಮತ್ತು ತಾಲೂಕುಗಳನ್ನು ಒಳಗೊಂಡು ಒಟ್ಟು 7 ದಂಪತಿಗಳು ಮನಸ್ತಾಪ ಮರೆತು, ಜನತಾ ನ್ಯಾಯಾಲಯದ ಮೂಲಕ ಒಂದಾಗಿ ವೈವಾಹಿಕ ಜೀವನ ಮುಂದುವರಿಯಲು ಇದೇ ವೇಳೆ ಒಪ್ಪಿಕೊಂಡರು.

ಭೂ ಸ್ವಾಧೀನ ಪರಿಹಾರ: 96 ಭೂ ಸ್ವಾಧೀನ ಪ್ರಕರಣಗಳು ಮತ್ತು 312 ಭೂ ಸ್ವಾಧೀನ ದರಖಾಸ್ತು ಪ್ರಕರಣಗಳು ಇತ್ಯರ್ಥಗೊಂಡು, ಒಟ್ಟು 31,41,56,802 ರೂ. ಹಣವನ್ನು ರಾಜಿಸಂಧಾನದ ಮೂಲಕ ಬಗೆಹರಿಸಲಾಗಿದೆ. ಬಳಿಕ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಹರೀಶ ಎ. ಅವರು ಮಾತನಾಡಿ, ಕಕ್ಷಿದಾರರು ವರ್ಷಗಟ್ಟಲೆ ಕೋರ್ಟ್ ಅಲೆಯುವ ಬದಲು ಜನತಾ ನ್ಯಾಯಾಲಯದ ರಾಜಿಸಂಧಾನದ ಮೂಲಕ ಪ್ರಕರಣ ಇತ್ಯರ್ಥಪಡಿಸಿಕೊಂಡರೆ ಹಣ ಮತ್ತು ಸಮಯ ಎರಡೂ ಉಳಿತಾಯವಾಗುತ್ತದೆ. ಹಾಗಾಗಿ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

**ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 10,925 ಪ್ರಕರಣಗಳ ಯಶಸ್ವಿ ಇತ್ಯರ್ಥ । ವಿರಸ ಮರೆತು ಒಂದಾದ 7 ಜೋಡಿಗಳು । 31.41 ಕೋಟಿ ರೂ. ಅಧಿಕ ಪರಿಹಾರ ರಾಜಿ ಸಂಧಾನ**



ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಅರವಿಂದ ಸಾಯಬಣ್ಣ ಹಾಗರಗಿ ಅವರು ಮಾತನಾಡಿ, ಸಾರ್ವಜನಿಕರು ಶೀಘ್ರ ನ್ಯಾಯ ಪಡೆದುಕೊಂಡು ಸೌಹಾರ್ದತೆಯಿಂದ ಸಮಾಜದಲ್ಲಿ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು. ಲೋಕ್ ಅದಾಲತ್‌ನ ಯಶಸ್ಸಿಗೆ ಶ್ರಮಿಸಿದ ಎಲ್ಲಾ ನ್ಯಾಯಾಂಗ ಅಧಿಕಾರಿಗಳು, ವಕೀಲರು, ಪೊಲೀಸ್ ಸಿಬ್ಬಂದಿ, ಕಕ್ಷಿದಾರರು ಹಾಗೂ ಪ್ರಾಧಿಕಾರದ ಸಿಬ್ಬಂದಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮೆಚ್ಚುಗೆ ವ್ಯಕ್ತಪಡಿಸಿತು.

# ಜೋಡೆತ್ತಿನ ಕೃಷಿ ಪದ್ಧತಿ ಉಳಿಸಲು ಯೋಜನೆ ರೂಪಿಸಲು ಆಗ್ರಹ

## ಸಿಂದಗಿಯಲ್ಲಿ ನೂರಾರು ಜೋಡೆತ್ತುಗಳೊಂದಿಗೆ ರೈತರ ಪ್ರತಿಭಟನೆ । ರೈತರಿಗೆ ಮಾಸಿಕ 11ಸಾವಿರ ಪ್ರೋತ್ಸಾಹಧನ ನೀಡಲು ಒತ್ತಾಯ



ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಎತ್ತಿನ ನೇಗಿಲಿನಿಂದ ಉಳುಮೆ ಮಾಡುವ ಮೂಲಕ ಮಣ್ಣು, ಪರಿಸರ ಹಾಗೂ ಕೃಷಿ ಸಂಸ್ಕೃತಿಯ ಸಂರಕ್ಷಣೆಗೆ ಕೊಡುಗೆ ನೀಡುತ್ತಿರುವ ಜೋಡೆತ್ತಿನ ಕೃಷಿಕರನ್ನು ನೇಗಿಲಯೋಗಿಗಳು ಎಂದು ಗುರುತಿಸಬೇಕು. ಸಾಂಪ್ರದಾಯಿಕ ಕೃಷಿ ಪದ್ಧತಿಗಳ ನಿರ್ಲಕ್ಷ್ಯದಿಂದ ಮಣ್ಣಿನ ಫಲವತ್ತತೆ ಕುಸಿಯುತ್ತಿದ್ದು, ಪರಿಸರದ ಮೇಲೂ ಪರಿಣಾಮ ಬೀರುತ್ತಿದೆ. ಹೀಗಾಗಿ ಜೋಡೆತ್ತಿನ ಕೃಷಿ ಪದ್ಧತಿಯನ್ನು ಸಂರಕ್ಷಿಸುವುದು ಅಗತ್ಯವಾಗಿದೆ ಎಂದು ರೈತ ಮುಖಂಡ ಪೀರು ಕೆರೂರ ಹೇಳಿದರು.

ಜೋಡೆತ್ತಿನ ಕೃಷಿ ಪದ್ಧತಿಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ರಾಜ್ಯ ಸರ್ಕಾರವು ನಂದಿ ಕೃಷಿ ಸಂಸ್ಕೃತಿ ಪುನಶ್ಚೇತನ ಕಾನೂನು ಜಾರಿಗೆ ತಂದು ರಾಜ್ಯದ ಬಜೆಟ್‌ನಲ್ಲಿ ಶೇ.10ರಷ್ಟು ಅನುದಾನ ಮೀಸಲಿಡಬೇಕು ಹಾಗೂ ಜೋಡೆತ್ತಿನ ಕೃಷಿಕರಿಗೆ ಪ್ರತಿ ತಿಂಗಳು 11ಸಾವಿರ ಪ್ರೋತ್ಸಾಹ ಧನ ನೀಡಬೇಕು ಎಂದು ತಾಲೂಕಿನ ರೈತರು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಅವರಿಗೆ ಹಕ್ಕೊತ್ತಾಯಿಸಿ ಮನವಿ ಸಲ್ಲಿಸಿ ಮಾತನಾಡಿದ ಅವರು, ಜೋಡೆತ್ತುಗಳು ಗ್ರಾಮೀಣ ಕೃಷಿ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಅವುಗಳನ್ನು ಸಾಕುತ್ತಿರುವ ರೈತರಿಗೆ ಸರ್ಕಾರ ಸೂಕ್ತ ನೆರವು ನೀಡಬೇಕು. ರೈತರ ಬೇಡಿಕೆಯನ್ನು ಸರ್ಕಾರ ಕೂಡಲೇ ಪರಿಗಣಿಸಿ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಅಶೋಕ ಅಲ್ಲಾಪುರ, ದಶರಥ ರಜಪೂತ ಮತ್ತು ಭೀಮಣ್ಣ ಹೇರೂರ ಮಾತನಾಡಿ, ಜೋಡೆತ್ತಿನ ಕೃಷಿಕರ ಕೊಡುಗೆಯನ್ನು ಗುರುತಿಸಿ, ಬಯಲುಸೀಮೆಯ ಗ್ರಾಮಗಳನ್ನು ಸ್ವಾವಲಂಬಿಗಳನ್ನಾಗಿಸುವ ನಿಟ್ಟಿನಲ್ಲಿ ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು. ಜೋಡೆತ್ತಿನ ಕೃಷಿಕರು ಸಂಪೂರ್ಣವಾಗಿ ನಾಶವಾದರೆ ಸಾಂಪ್ರದಾಯಿಕ ಕೃಷಿ ಪದ್ಧತಿ ಹಾಗೂ ಗ್ರಾಮೀಣ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ದೇವೇಂದ್ರ ಕಡ್ಲಗೊಂಡ, ಮಹಾದೇವ ನಾಗಠಾಣ, ಸಾಹೇಬಗೌಡ ಮರಡಿ, ಗೌಡಪ್ಪ ಪರಗೊಂಡ, ಶ್ರೀನಾಥಗೌಡ ಪರಗೊಂಡ, ಹುಸೇನಿಸಾಬ ಕುಮಸಗಿ, ರೇವಣಸಿದ್ಧ ವಗ್ಗಿ, ರಾಯಪ್ಪ ಅಲ್ಲಾಪುರ, ಬಸವರಾಜ ರಂಜುಣಗಿ, ಭಗವಂತರಾಯ ಬಿರಾದಾರ, ಸಂತೋಷ ಶಿವೂರ, ಶಿವಶರಣ ಹಳ್ಳಿ, ವಿಠ್ಠಲ ಬಾಳಪ್ಪಗೋಳ ಸೇರಿದಂತೆ ವಿವಿಧ ಗ್ರಾಮಗಳ ರೈತರು ಹಾಗೂ ಜೋಡೆತ್ತುಗಳ ಮಾಲೀಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

### ಎತ್ತಿನ ಬಂಡಿಗಳಲ್ಲಿ ಆಗಮಿಸಿ ಮನವಿ

**ಸಿಂದಗಿ ನಗರದ ಬೈಪಾಸ್‌ಯಿಂದ ಸಿಂದಗಿಯ ಸುಮಾರು 50ಕ್ಕೂ ಹೆಚ್ಚು ರೈತರು, ಯರಗಲ್ ಗ್ರಾಮದಿಂದ 150ಕ್ಕೂ ಹೆಚ್ಚು ರೈತರು, ಸೋಂಪುರ, ಹಿಕ್ಕನಗುತ್ತಿ ಹಾಗೂ ಸುತ್ತಮುತ್ತಲಿನ ವಿವಿಧ ಗ್ರಾಮಗಳಿಂದ ರೈತರು 200ಕ್ಕೂ ಅಧಿಕ ಜೋಡೆತ್ತುಗಳನ್ನು ಕಟ್ಟಿಕೊಂಡು ಕೃಷಿಕರು ಎತ್ತಿನ ಬಂಡಿಗಳ ಮೂಲಕ ತಹಶೀಲ್ದಾರ್ ಕಚೇರಿಗೆ ಆಗಮಿಸಿ, ಹಕ್ಕೊತ್ತಾಯ ಪತ್ರ ಸಲ್ಲಿಸುವ ಮೂಲಕ ಸರ್ಕಾರದ ಗಮನ ಸೆಳೆದರು.**




# ಸೇನೆಗೆ ಸೇರುವ ಕನಸು ನನಸಾಗಿಸಲು ನಿರಂತರ ಶ್ರಮ, ಶಿಸ್ತು ಅಗತ್ಯ

■ ಉದಯರಶ್ಮಿ ದಿನಪತ್ರಿಕೆ

**■ ಅಗ್ನಿವೀರ ನೇಮಕಾತಿ ರ್‍ಯಾಲಿ ಸಮಾರೋಪ । ಸಮಾರಂಭರ್‍ಯಾಲಿ ಯಶಸ್ವಿಗೊಳಿಸಿದ ಜಿಲ್ಲಾಡಳಿತಕ್ಕೆ ಕೃತಜ್ಞತೆ ಸಲ್ಲಿಸಿದ ಕರ್ನಲ್ ಸೋಮು ಅಭಿಮತ**

ವಿಜಯಪುರ: ಸೇನೆಗೆ ಸೇರುವ ಕನಸು ಹೊತ್ತ ಯುವಕರು ನಿರಂತರ ಪರಿಶ್ರಮ ಮತ್ತು ಶಿಸ್ತು ಕಾಯ್ದುಕೊಳ್ಳಬೇಕು ಎಂದು ಕರ್ನಲ್ ಸೋಮು ಅವರು ಹೇಳಿದರು.

ಭಾರತೀಯ ಸೇನೆಯ ಮಂಗಳೂರು ನೇಮಕಾತಿ ವಲಯ ಹಾಗೂ ವಿಜಯಪುರ ಜಿಲ್ಲಾಡಳಿತದ ಸಹಯೋಗದಲ್ಲಿ ಇಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಅಗ್ನಿವೀರ ನೇಮಕಾತಿ ರ್‍ಯಾಲಿಯ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸೇನೆ ಸೇರುವ ಕನಸು ಏಕಾಏಕಿಯಾಗಿ ಈಡೇರದಿದ್ದಲ್ಲಿ, ಯುವಕರು ಆತಂಕ ಕ್ಕೊಳಗಾಗಬೇಕಿಲ್ಲ. ಅದೇ ಉತ್ಸಾಹ, ನಿರಂತರ ದೈಹಿಕ ಅಭ್ಯಾಸ ಮತ್ತು ಶಿಸ್ತು ಮೈಗೂಡಿಸಿಕೊಂಡರೆ ಖಂಡಿತವಾಗಿಯೂ ಸೇನೆ ಸೇರ್ಪಡೆ ಕನಸು ಸಾಕಾರವಾಗುತ್ತದೆ ಎಂದರು.

ಭಾರತೀಯ ಸೇನೆ ಸೇರುವುದು ದೇಶಸೇವೆಯ ಅತ್ಯಂತ ಮಹತ್ವದ ಅವಕಾಶ. ವಿಜಯಪುರದಲ್ಲಿ ನಡೆದ ರ್‍ಯಾಲಿಯಲ್ಲಿ ಭಾಗವಹಿಸಿದ 11 ಜಿಲ್ಲೆಗಳ ಯುವಕರು ಸದಾ ಶಿಸ್ತು, ಉತ್ಸಾಹ ಹಾಗೂ ದೈಹಿಕ ಸಾಮರ್ಥ್ಯ ಪ್ರದರ್ಶಿಸಿದರು. ಇದರಿಂದಾಗಿ ನೇಮಕಾತಿ ಪ್ರಕ್ರಿಯೆ ಶಿಸ್ತಿನಿಂದ ನಡೆಯಲು ಅನುಕೂಲವಾಯಿತು ಎಂದರು. ಆನ್‌ಲೈನ್ ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದು, ರ್‍ಯಾಲಿಯ ದೈಹಿಕ ಹಾಗೂ ವೈದ್ಯಕೀಯ ತಪಾಸಣೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮುಂದಿನ ಹಂತದ ಸಿದ್ಧತೆ ಮಾಡಿಕೊಳ್ಳಲು ಇದೇ ವೇಳೆ ಅವರು ಶುಭ ಹಾರೈಸಿದರು.

ಜೊತೆಗೆ ರ್‍ಯಾಲಿಯ ಸುಸೂತ್ರ ನಿರ್ವಹಣೆಗೆ ಶ್ರಮಿಸಿದ ವಿಜಯಪುರ ಜಿಲ್ಲಾಡಳಿತದ ಸಹಕಾರವನ್ನು ಸ್ಮರಿಸಿದ ಕರ್ನಲ್ ಸೋಮು ಅವರು, 11 ಜಿಲ್ಲೆಗಳಿಂದ ಆಗಮಿಸಿದ ಎಲ್ಲ ಅಭ್ಯರ್ಥಿಗಳಿಗೆ ಸಕಲ ರೀತಿಯ ವ್ಯವಸ್ಥೆ ಮಾಡಿದ ಜಿಲ್ಲಾಡಳಿತದ ಕ್ರಮವನ್ನು ಮುಕ್ತಕಂಠದಿಂದ ಪ್ರಶಂಸಿಸಿ, ಕೃತಜ್ಞತೆ ಸಲ್ಲಿಸಿದರು.

ಅಭ್ಯರ್ಥಿಗಳಿಗೆ ಸೂಕ್ತ ವಸತಿ, ಕುಡಿಯುವ ನೀರು, ವೈದ್ಯಕೀಯ ಸೇವೆ ಹಾಗೂ ಭದ್ರತೆ ಒದಗಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸೈನಿಕ ಕಲ್ಯಾಣ ಹಾಗೂ ಪುನರ್ವಸತಿ ಇಲಾಖೆಯ ಉಪ ನಿರ್ದೇಶಕ ವಿನಯಕುಮಾರ ಪಾಟೀಲ, ಕ್ರೀಡಾಧಿಕಾರಿ ರಾಜಶೇಖರ ಧೈವಾಡಿ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ವಿಜಯಪುರ ಬಳ್ಳಾರಿ ನಡುವೆ ನೂತನ ನಾನ್ ಎ.ಸಿ. ಸ್ಲೀಪರ್ ಬಸ್ ಸೇವೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದ ಡಿಪೋ–3 ವತಿಯಿಂದ ಪ್ರಯಾಣಿಕರ ಅನುಕೂಲಕ್ಕಾಗಿ ವಿಜಯಪುರ ಬಳ್ಳಾರಿ ನಡುವೆ ನೂತನ ನಾನ್ ಎ.ಸಿ. ಸ್ಲೀಪರ್ ಬಸ್ ಸೇವೆಯನ್ನು ಆರಂಭಿಸಲಾಗಿದೆ.

ಸೆಪ್ಟೆಂಬರ್ 17ರಿಂದ ಸೇವೆ ಆರಂಭವಾಗಿದ್ದು, ವಿಜಯಪುರದಿಂದ ಪ್ರತಿದಿನ ಬೆಳಿಗ್ಗೆ 10 ಗಂಟೆಗೆ ಹೊರಡುವ ಬಸ್ ಸಂಜೆ 6 ಗಂಟೆಗೆ ಬಳ್ಳಾರಿ ತಲುಪಲಿದೆ. ಬಸ್ ಪ್ರಯಾಣದ ದರವನ್ನು ಪ್ರತಿ ಪ್ರಯಾಣಿಕರಿಗೆ ರೂ.660 ಎಂದು ನಿಗದಿಪಡಿಸಲಾಗಿದೆ.

ಪ್ರಯಾಣಿಕರಿಗೆ ಆರಾಮದಾಯಕ, ಸ್ವಚ್ಛ ಹಾಗೂ ಸುರಕ್ಷಿತ ಪ್ರಯಾಣದ ಸೌಲಭ್ಯ ಒದಗಿಸುವ ಉದ್ದೇಶದಿಂದ ಈ ಸೇವೆ ಆರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೆಕೆಆರ್‌ಟಿಸಿ ವಿಜಯಪುರ ವಿಭಾಗೀಯ ನಿಯಂತ್ರಣಾಧಿಕಾರಿ ದೇವಾನಂದ ಬಿರಾದಾರ ಅವರು ಮನವಿ ಮಾಡಿದ್ದಾರೆ.

## ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅಧಿಕಾರಿಗಳಿಗೆ ಸೂಚನೆ

# ಬರ ನಿರ್ವಹಣೆಯಲ್ಲಿ ಸಮನ್ವಯದಿಂದ ಕಾರ್ಯನಿರ್ವಹಿಸಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಒಂದು ತಂಡವಾಗಿ ಕಾರ್ಯನಿರ್ವಹಿಸಬೇಕು. ಕುಡಿಯುವ ನೀರು ಸೇರಿದಂತೆ ಬರ ನಿರ್ವಹಣೆಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಎದುರಾದಾಗ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೇಸ್ವಾನ್ ಸಭಾಂಗಣದಲ್ಲಿ ಸೋಮವಾರ ನಡೆದ ಬರ ಹಾಗೂ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಲುವೆಗಳ ಮೂಲಕ ನೀರು ಹರಿಸುವ ಸಂದರ್ಭದಲ್ಲಿ ಕುಡಿಯುವ ನೀರು ವ್ಯರ್ಥವಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಈ ಕುರಿತು ತಾಲೂಕು ಮಟ್ಟದಲ್ಲಿ ಕಾರ್ಯಪಡೆ ಸಭೆ ನಡೆಸಿ, ಸಂಬಂಧಿಸಿದ ಅಧಿಕಾರಿಗಳು ನಿರಂತರವಾಗಿ ಪರಿಶೀಲನೆ ನಡೆಸಬೇಕು. ಸ್ಥಳೀಯವಾಗಿ ಸೂಕ್ತ ಗಮನ ಹರಿಸದಿದ್ದರೆ, ಪೂರೈಕೆಯಾದ ನೀರು ಎಷ್ಟು ಪ್ರಮಾಣದಲ್ಲಿ ಹಾಗೂ ಎಲ್ಲಿಯವರೆಗೆ ತಲುಪಿದೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಧಿಕಾರಿಗಳು ಈಗಿನಿಂದಲೇ ಸಮರ್ಪಕವಾಗಿ ಗಮನಹರಿಸಬೇಕು ಎಂದು ಹೇಳಿದರು.

ಕುಡಿಯುವ ನೀರು ಪೂರೈಕೆ ಮಾಡಿದ ನಂತರ ಅದು ನಿಗದಿತ ಗ್ರಾಮ, ಪ್ರದೇಶ ಹಾಗೂ ಜನರಿಗೆ ಸಮರ್ಪಕವಾಗಿ ತಲುಪಿದೆಯೇ ಎಂಬುದನ್ನು ಅಧಿಕಾರಿಗಳು ಖುದ್ದಾಗಿ ಪರಿಶೀಲಿಸಬೇಕು ಎಂದರು.

ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಸಮಸ್ಯೆಯ ಮೂಲ ಕಾರಣವನ್ನು ಅರಿತುಕೊಂಡು ತಕ್ಷಣ ಪರಿಹಾರ ಕ್ರಮ ಕೈಗೊಳ್ಳಬೇಕು. ಸಮಸ್ಯೆ ಉಲ್ಬಣಿಸುವವರೆಗೆ ಕಾಯದೆ, ಮುಂಚಿತವಾಗಿಯೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ವಸತಿ ನಿಲಯಗಳಲ್ಲಿ ಶುದ್ಧ ಕುಡಿಯುವ ನೀರಿಗೆ ಆದ್ಯತೆ: ಜಿಲ್ಲೆಯಲ್ಲಿರುವ ವಸತಿ ನಿಲಯಗಳಲ್ಲಿ ಕಲುಷಿತ ನೀರು ಪೂರೈಕೆಯಾಗದಂತೆ ಎಚ್ಚರವಹಿಸಿ, ವಸತಿ ನಿಲಯಗಳಲ್ಲಿ ಗುಣಮಟ್ಟದ ಕುಡಿಯುವ ನೀರು ಪೂರೈಕೆಯಾಗುತ್ತಿದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಬೇಕು ಎಂದು ಅವರು ತಿಳಿಸಿದರು.

ಬರ ಪೀಡಿತ ಪ್ರದೇಶಗಳ ಅಧ್ಯಯನಕ್ಕಾಗಿ ಕೇಂದ್ರ ತಂಡ ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಬರ ಪರಿಸ್ಥಿತಿ, ಕುಡಿಯುವ ನೀರು, ಕೃಷಿ, ಜಾನುವಾರು, ಬೆಳೆ ಹಾನಿ ಸೇರಿದಂತೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸಿ ತಂಡಕ್ಕೆ ಸಮರ್ಪಕವಾಗಿ ಒದಗಿಸಬೇಕು. ಬರ ನಿರ್ವಹಣೆಗೆ ಸಂಬಂಧಿಸಿದ ಕ್ರಮಗಳನ್ನು ಇಲಾಖೆಗಳು ತ್ವರಿತವಾಗಿ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.


ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ ಮಾತನಾಡಿ, ಗ್ರಾಮೀಣ ಭಾಗದ ಎಲ್ಲ ಹಳ್ಳಿಗಳು ಹಾಗೂ ಗ್ರಾಮಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆಯಾಗುವಂತೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ವಿಶೇಷ ಗಮನಹರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ,ಉಪ ಅರಣ್ಯ ಸಂರಕ್ಷಾಧಿಕಾರಿ ಮಲ್ಲಿನಾಥ ಕುಸನಾಳ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದಿನ್ ಸೌದಾಗರ್, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಗೂ ವಿಡಿಯೋ ಸಂವಾದದ ಮೂಲಕ ಜಿಲ್ಲೆಯ ಎಲ್ಲಾ ತಾಲೂಕುಗಳ ತಹಶೀಲ್ದಾರರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಸತಿ ಪತಿಯನ್ನು ಒಂದಾಗಿಸಿದ ಲೋಕ ಅದಾಲತ್

■ ಉದಯರಶ್ಮಿ ದಿನಪತ್ರಿಕೆ

**■ 2637 ಪ್ರಕರಣ ಇತ್ಯರ್ಥ । ಒಂದು ಕೋಟಿ 71 ಲಕ್ಷ ರೂ. ಹಣ ಸಂದಾಯ । ಹಿರಿಯ ದಿವಾನಿ ನ್ಯಾಯಾಧೀಶ ಕೋಟಪ್ಪ ಕಾಂಬಳೆ ಹೇಳಿಕೆ**



ಇಂಡಿ: ವರ್ಷದ ಮೂರನೆಯ ಲೋಕ ಅದಾಲತನಲ್ಲಿ ವೈವಾಹಿಕ ಪ್ರಕರಣವನ್ನು ಇತ್ಯರ್ಥ ಪಡಿಸಲಾಗಿದೆ. ಪುಂಡಲೀಕ ತಮ್ಮಣ್ಣ ರೂಗಿಯವರು ತಮ್ಮ ಸಂಗಾತಿ ಭಾರತಿಯವರೊಂದಿಗೆ ಮರುಜೀವನ ನಡೆಸಲು ಕೊಟೆಪ್ಪ ಕಾಂಬಳೆ ಹಿರಿಯ ದಿವಾನಿ ನ್ಯಾಯಾಧೀಶರು ಸತಿ ಪತಿ ಒಂದುಗೂಡಿಸಿದರು.

ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ 2637 ಪ್ರಕರಣಗಳು ಇತ್ಯರ್ಥ ಗೊಂಡಿವೆ ಮತ್ತು ಒಂದು ಕೋಟಿ 71 ಲಕ್ಷ ರೂ ಸರಕಾರಕ್ಕೆ ಸಂದಾಯವಾಗಿದೆ ಎಂದು ಹಿರಿಯ ದಿವಾನಿ ನ್ಯಾಯಾಧೀಶ ಕೋಟಪ್ಪ ಕಾಂಬಳೆ ತಿಳಿಸಿದರು. ನ್ಯಾಯಾಲಯದ ಆವರಣದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ರಾಜಿ ಮೂಲಕ ನ್ಯಾಯ ಇತ್ಯರ್ಥದಿಂದ ನ್ಯಾಯಾಲಯಗಳಿಗೆ ಅಲೆದಾಟ ತಪ್ಪುತ್ತದೆ. ಪರಸ್ಪರ ಸೌಹಾರ್ದ ಬೆಳೆಯುತ್ತದೆ. ಸಾರ್ವಜನಿಕರು ಸಹ ರಾಜಿ ಸಂಧಾನಕ್ಕೆ ಆದ್ಯತೆ ನೀಡಿ ಪ್ರಕರಣ ಇತ್ಯರ್ಥದ ಮೂಲಕ ನೆಮ್ಮದಿ ಜೀವನ ನಡೆಸಲು ಮುಂದೆ ಬರಬೇಕು ಎಂದರು. ದಿವಾಣಿ ನ್ಯಾಯಾಧೀಶರು ಸುನೀಲಕುಮಾರ ಎಮ್.ಎಸ್, ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವಿಕಾಶ ದಳವಾಯಿ ಇವರ ಸಮ್ಮುಖದಲ್ಲಿ ರೂಗಿ ದಂಪತಿಗಳು ಒಂದಾಗಿ ಪರಸ್ಪರ ಹೂ ಮಾಲೆ ಹಾಕಿಕೊಂಡು ಸಿಹಿ ಹಂಚಿ ಸಂಭ್ರಮಿಸಿದರು.

ಪಿ.ಜೆ.ಹಂಜಗಿ, ಎಮ್.ಎಮ್ ಕುಲಕರ್ಣಿ, ಸಹಾಯಕ ಸರಕಾರಿ ಅಭಿಯೋಜಕ ರಾಖಿ ಕಟ್ಟಿಮನಿ, ಎಸ್.ಆರ್.ಬಿರಾದಾರ, ಬಿ.ಎಸ್.ತಳವಾರ, ಆರ್.ಎಮ್ ಪಾಟೀಲ, ಡಿ.ಎಸ್. ಹಾಲಕವಡಿ, ವಿ.ಜಿ.ಗಾಯಕವಾಡ, ಶ್ರೀಮತಿ ಪಿ.ಬಿ.ಬಬಲೇಶ್ವರ, ಎಸ್.ಎಮ್ ಬಬಲಾದ ಮತ್ತಿತರಿದ್ದರು.

# ಬಿಜೆಪಿ ರೈತ ಮೋರ್ಚಾ & ಜೆಡಿಎಸ್ ನೇತೃತ್ವದಲ್ಲಿ ಬೃಹತ್ ಹೋರಾಟ

■ ಉದಯರಶ್ಮಿ ದಿನಪತ್ರಿಕೆ

**ತಾಳಿಕೋಟೆ ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹ । ಸರ್ಕಾರ ಸ್ಪಂದಿಸದಿದ್ದರೆ ಡಿಸಿ ಕಚೇರಿಗೆ ಮುತ್ತಿಗೆ । ಮಾಜಿ ಶಾಸಕ ಸೋಮನಗೌಡ ಎಚ್ಚರಿಕೆ**



ತಾಳಿಕೋಟೆ: ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿ ಬಿಜೆಪಿ ರಾಜ್ಯ ರೈತ ಮೋರ್ಚಾ ಹಾಗೂ ಜೆಡಿಎಸ್ ಪಕ್ಷದ ನೇತೃತ್ವದಲ್ಲಿ ನಡೆದ ಬೃಹತ್ ಹೋರಾಟ ಯಶಸ್ವಿಯಾಗಿದೆ.

ಪ್ರತಿಭಟನಾ ನಂತರ ಬಸವೇಶ್ವರ ವೃತ್ತದಲ್ಲಿ ನಡೆದ ಭಹಿರಂಗ ಸಭೆಯಲ್ಲಿ ನೇತೃತ್ವ ವಹಿಸಿದ್ದ ಮಾಜಿ ಶಾಸಕ ಸೋಮನಗೌಡ ಪಾಟೀಲ ಸಾಸನೂರ, ಅವರು ಮಾತನಾಡಿ ಬರ ಪರಿಹಾರ ಘೋಷಣೆ ವಿಚಾರದಲ್ಲಿ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ತಾಳಿಕೋಟೆ ತಾಲೂಕು ಒಳಗೊಂಡು ವಿಜಯಪುರ ಜಿಲ್ಲೆಯಲ್ಲಿಯೇ ಸಮರ್ಪಕ ಮಳೆಯಾಗದೆ ಹತ್ತಿ, ತೊಗರಿ ಸೇರಿದಂತೆ ವಿವಿಧ ಬೆಳೆಗಳು ಹಾನಿಗೊಳಗಾಗಿದ್ದು, ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಾಲೂಕನ್ನು ತೀವ್ರ ಬರಪೀಡಿತ ತಾಲೂಕು ಎಂದು ಘೋಷಿಸಿ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಅಧಿವೇಶನದಲ್ಲಿ ಜಿಲ್ಲೆಯ ಎಲ್ಲ ಶಾಸಕರು ತಾಳಿಕೋಟೆ ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು. ರೈತರ ಸಮಸ್ಯೆಗೆ ಸ್ಪಂದಿಸದಿದ್ದರೆ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ರೈತರ ಪರ ನಿಲ್ಲಬೇಕು ಎಂದು ಸಾಸನೂರ ಆಗ್ರಹಿಸಿದರು. ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಬುಧವಾರ ಸಾಂಕೇತಿಕವಾಗಿ ವಿಜಯಪುರ ನಗರದಲ್ಲಿ ಪ್ರತಿಭಟನೆ ನಡೆಸಲಾಗುವುದು. ಈ ಕುರಿತು ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಮುಖಂಡರುಗಳು ನಿರ್ಧಾರ ತೆಗೆದುಕೊಂಡಿದ್ದೇವೆ ಅಧಿವೇಶನ ಮುಗಿಯುವದರೊಳಗೆ ಬರಪೀಡಿತ ತಾಲೂಕು ಘೋಷಿಸದಿದ್ದರೆ ಸುಮಾರು 10 ಸಾವಿರಕ್ಕೂ ಅಧಿಕ ರೈತರು ಹಾಗೂ ಸಾರ್ವಜನಿಕರನ್ನು ಸಂಘಟಿಸಿ ವಿಜಯಪುರ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವದೆಂದು ಅವರು ಎಚ್ಚರಿಕೆ ನೀಡಿದರು. ನೇತೃತ್ವ ವಹಿಸಿದ್ದ ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್.ಪಾಟೀಲ(ನಡಹಳ್ಳಿ) ಮಾತನಾಡಿ, ಬರಗಾಲದಿಂದ ಸಂಕಷ್ಟಕ್ಕೀಡಾಗಿರುವ ರೈತರ ಸಮಸ್ಯೆಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಿ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ, ಹೋರಾಟವನ್ನು ಯಾವುದೇ ಕಾರಣಕ್ಕೂ ಹತ್ತಿಕ್ಕುವ ಅಥವಾ ರೈತ ಮುಖಂಡರನ್ನು ಬಂಧಿಸುವ ಪ್ರಯತ್ನ ಮಾಡಬಾರದು. ಅಂತಹ ಪ್ರಯತ್ನ ನಡೆದರೆ ಹೋರಾಟ ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳಲಿದೆ ರಾಜ್ಯದಲ್ಲಿ ಲಕ್ಷಾಂತರ ರೈತರು ನಮ್ಮೊಂದಿಗೆ ಇದ್ದಾರೆ. ನಮ್ಮನ್ನು ಹತ್ತಿಕ್ಕುವ ಅಥವಾ ರೈತರ ಮೇಲೆ ಒತ್ತಡ ಹೇರುವ ಯಾವುದೇ ಪ್ರಯತ್ನ ನಡೆದರೆ ಅದರ ಪರಿಣಾಮ ಇಡೀ ಕರ್ನಾಟಕದಲ್ಲಿ ಪ್ರತಿಧ್ವನಿಸಲಿದೆ. ರೈತರ ಹೋರಾಟವನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಹೋರಾಟವನ್ನು ಅಂತಿಮ ಹಂತದವರೆಗೆ ಕೊಂಡೊಯ್ಯಲಾಗುವುದು ಎಂದು ಹೇಳಿದರು.

ಮುಖಂಡರಾದ ಬಸನಗೌಡ ಯಡಿಯಾಪೂರ, ಬಸನಗೌಡ ಮಾಡಗಿ, ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡುಸಾಹುಕಾರ ಬಿರಾದಾರ ಬಸನಗೌಡ ವಣಕ್ಯಾಳ, ಜೈಸಿಂಗ್ ಮೂಲಿಮನಿ, ಪ್ರಭುಗೌಡ ಅಸ್ಕಿ, ರಾಜುಗೌಡ ಗುಂಡಕನಾಳ, ಎಂ.ಎಂ.ಪಾಟೀಲ, ಶ್ರೀಮತಿ ಸುವರ್ಣಾ ಬಿರಾದಾರ, ಬಸನಗೌಡ ಮಾಡಗಿ, ಸಂಗನಗೌಡ ಹೆಗರಡ್ಡಿ, ಸಾಯಬಣ್ಣ ಆಲ್ಯಾಳ, ಡಾ.ಭಲವಂತ್ರಾಯ ನಡಹಳ್ಳಿ, ರಾಜುಗೌಡ ಕೊಳೂರ, ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣವರ, ಒಳಗೊಂಡು ಮೊದಲಾದವರು ಉಪಸ್ಥಿತರಿದ್ದರು.

### ಅನ್ನದಾತನ ಕೂಗಿಗೆ ಸ್ಥಬ್ಧಗೊಂಡ ತಾಳಿಕೋಟೆ



**ತಾಳಿಕೋಟೆ: ತಾಲೂಕು ಒಳಗೊಂಡು ವಿಜಯಪುರ ಜಿಲ್ಲೆಯನ್ನು ಸಂಪೂರ್ಣ ಬರಪೀಡಿತ ಜಿಲ್ಲೆ ಎಂದು ಘೋಷಿಸಬೇಕು ಎಂದು ಆಗ್ರಹಿಸಿ ಭಾರತೀಯ ಜನತಾ ಪಕ್ಷ ರೈತ ಮೋರ್ಚಾ ಹಾಗೂ ಜೆಡಿಎಸ್ ಪಕ್ಷದ ನೇತೃತ್ವದಲ್ಲಿ ಸೋಮವಾರರಂದು ಕರೆ ನೀಡಿದ್ದ ತಾಳಿಕೋಟೆ ಬಂದ್ ಸಂಪೂರ್ಣ ಯಶಸ್ವಿಯಾಯಿತು.**

**ಬರಪೀಡಿತ ತಾಲೂಕು ಘೋಷಣೆಗೆ ಆಗ್ರಹಿಸಿ ನಡೆಯುತ್ತಿರುವ ಹೋರಾಟದ ಭಾಗವಾಗಿ 3 ದಿನಗಳ ಸತತ ಹೋರಾಟದ ನಂತರ ಸೋಮವಾರರಂದು ಸಂಪೂರ್ಣ ಬಂದ್ ಕರೆಯೊಂದಿಗೆ ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠದಿಂದ ಬೃಹತ್ ಪ್ರತಿಭಟನೆಯ ಮೂಲಕ ಕತ್ರಿ ಬಜಾರ, ವಿಠ್ಠಲ ಮಂದಿರ ರಸ್ತೆ, ಶಿವಾಜಿ ಮಹಾರಾಜರ ವೃತ್ತ, ಬಸ್ ನಿಲ್ದಾಣದ ಮುಂಭಾಗದ ರಸ್ತೆಗುಂಟಾ ಹಾಯ್ದು ಬಸವೇಶ್ವರ ವೃತ್ತದಲ್ಲಿ ಸಭೆಯಾಗಿ ಮಾರ್ಪಟ್ಟಿತು.**

**ತಾಳಿಕೋಟೆ ಪಟ್ಟಣದ ಮುಖ್ಯ ರಸ್ತೆಯಲ್ಲಿರುವ ಬಹುತೇಕ ಎಲ್ಲ ಅಂಗಡಿ–ಮುಂಗಟ್ಟುಗಳು ಬೆಳಗ್ಗೆಯಿಂದಲೇ ಮುಚ್ಚಿದ್ದವು. ಮದ್ಯ ಮಾರುಕಟ್ಟೆ, ಸರಾಫ್ ಬಜಾರ್, ಎಪಿಎಂಸಿ, ಕಿರಾಣಿ, ಅಡತ್ ಮರ್ಚಂಟ್, ತರಕಾರಿ, ಹಣ್ಣು ಸೇರಿದಂತೆ ವಿವಿಧ ವ್ಯಾಪಾರ ವಹಿವಾಟುಗಳು ಸಂಪೂರ್ಣ ಸ್ಥಗಿತಗೊಂಡಿದ್ದವು. ಪರಿಣಾಮ ಪಟ್ಟಣದ ಪ್ರಮುಖ ರಸ್ತೆಗಳು ಜನಸಂಚಾರವಿಲ್ಲದೆ ಬಿಕೋ ಎನ್ನುತ್ತಿದ್ದವು. ಬಂದ್‌ಗೆ ವ್ಯಾಪಾರಸ್ಥರು, ರೈತರು ಹಾಗೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.**

# ಸೆ.29 ರಂದು ಕೃಷಿ ಮಹಾವಿದ್ಯಾಲಯದಲ್ಲಿ ತಾತ್ಕಾಲಿಕ ಹುದ್ದೆಗೆ ನೇರ ಸಂದರ್ಶನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಧಾರವಾಡದ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ವಿಜಯಪುರ ಕೃಷಿ ಮಹಾವಿದ್ಯಾಲಯವು

ಯಾಂತ್ರೀಕರಣದ ಮೂಲಕ ಸಿರಿಧಾನ್ಯ ಉತ್ಪಾದನೆ ಮತ್ತು ಸಂಸ್ಕರಣೆಗೆ ಪುನಶ್ಚೇತನ ಯೋಜನೆಯಡಿ ತಾತ್ಕಾಲಿಕ ಹುದ್ದೆಯ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಆಹ್ವಾನಿಸಿದೆ.

ಟೆಕ್ನಿಕಲ್,ಫೀಲ್ಡ್ ಅಸಿಸ್ಟೆಂಟ್ ತಾಂತ್ರಿಕ–ಕ್ಷೇತ್ರ ಸಹಾಯಕ ತಾತ್ಕಾಲಿಕ ಒಂದು ಹುದ್ದೆಗಾಗಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಅಥವಾ ಆಟೋಮೊಬೈಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪದವೀಧರರಿಗೆ ಆದ್ಯತೆ ನೀಡಲಾಗುವುದು.

ನೇರ ಸಂದರ್ಶನ: ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ಅಗತ್ಯ ದಾಖಲೆಗಳು, ಮೂಲ ಪ್ರತಿಗಳು, ದೃಢೀಕೃತ ನಕಲು ಪ್ರತಿ ಹಾಗೂ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ಸೆ. 29 ರಂದು ಬೆಳಿಗ್ಗೆ 10.30ಕ್ಕೆ ವಿಜಯಪುರದ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕರ ಕಚೇರಿಯಲ್ಲಿ ನ ನಡೆಯಲಿರುವ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಯಾವುದೇ ಅರ್ಜಿಗಳನ್ನು ಮುಂಚಿತವಾಗಿ ಕಳುಹಿಸುವ ಅಗತ್ಯವಿರುವುದಿಲ್ಲ ಎಂದು ಕೃಷಿ ಮಹಾವಿದ್ಯಾಲಯ,ಎಂಜಿನಿಯರಿಂಗ್ ವಿಭಾಗದ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು "ಪುತ್ರಿಯರ ದಿನಸ್ಪಂದನ" ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ಕ್ಷೇಮಪಾಲನ ನಿರ್ದೇಶನಾಲಯದ ವತಿಯಿಂದ 2026–27ನೇ ಶೈಕ್ಷಣಿಕ ಪ್ರಥ–'ಮ ವರ್ಷಕ್ಕೆ ಪ್ರವೇಶ ಪಡೆದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ವಾಗತ ಕೋರುವ ಅಂಗವಾಗಿ "ಪುತ್ರಿಯರ ದಿನಸ್ಪಂದನ ಕಾರ್ಯಕ್ರಮ" ವನ್ನು ಇದೇ ಸೆ, 23ರಂದು ಬೆಳಿಗ್ಗೆ 11 ಗಂಟೆಗೆ ದಶಮಾನೋತ್ಸವ ಕಟ್ಟಡದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ವಿಜಯಾ ಬಿ. ಕೋರಿಶೆಟ್ಟಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಸ್. ಇಂದುಮತಿ ಭಾಗವಹಿಸಲಿದ್ದು, ಮಹಿಳಾ ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ. ಬಿ. ಎಲ್. ಲಕ್ಕಣ್ಣವರ್, ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ ಉಪಸ್ಥಿತರಿರಲಿದ್ದಾರೆ ಎಂದು ಮಹಿಳಾ ವಿವಿಯ ಕುಲಸಚಿವ ಡಾ. ವಿಜಯಕುಮಾರ್ ಅಜೂರ್ ಹಾಗೂ ವಿದ್ಯಾರ್ಥಿನಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕಿ ಪ್ರೊ. ಜ್ಯೋತಿ ಉಪಾಧ್ಯೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಸಪ್ರಶ್ನೆ: ಶ್ರೀ ಬಿ.ಎಂ.ಪಾಟೀಲ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳ ಸಾಧನೆ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೆಹಲಿಯ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಕಲ್ಚರ್ ಆ್ಯಂಡ್ ಹೆ–ರಿಟೇಜ್(ಇಂಟ್ಯಾಕ್) ಸಂಸ್ಥೆ ನಡೆಸಿದ ರಸಪ್ರಶ್ನೆ ಸ್ಪರ್ಧೆಯಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್(ಸಿಬಿಎಸ್‌ಈ) ಶಾಲೆಯ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆಯುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ನಗರದ ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರದಲ್ಲಿ ನಡೆದ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಶ್ರೀ. ಬಿ. ಎಂ.ಲ. ಪಾಟೀಲ ಪಬ್ಲಿಕ್ ಸಿ. ಬಿ. ಎಸ್. ಇ ಶಾಲೆಯ ವಿದ್ಯಾರ್ಥಿಗಳಾದ ಪ್ರಜ್ವಲ ಸಾವಳಗಿ ಮತ್ತು ದರ್ಶ ಕುಲಕರ್ಣಿ ತಂಡವು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದರೆ, ಶ್ರೀನಿಕಾ ಹಳ್ಳಿ ಮತ್ತು 7ನೇ ತರಗತಿಯ ವಿದ್ಯಾರ್ಥಿ ವಶಿಷ್ಠ ಗಣೇಶನವರ ಅವರ ತಂಡವ ದ್ವಿತೀಯ ಸ್ಥಾನ ಪಡೆಯಿತು.

ನಂತರ ನಡೆದ ಕಾರ್ಯಕ್ರಮದಲ್ಲಿ ಗೆಲುವು ಸಾಧಿಸಿದ ವಿದ್ಯಾರ್ಥಿಗಳಿಗೆ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ. ಎಂ. ಎಸ್. ಮದಭಾವಿ ಪ್ರಶಸ್ತಿ ವಿತರಿಸಿದರು.

ಈ ಸಂದರ್ಭದಲ್ಲಿ ಸಾಹಿತಿ ಪ್ರೊ. ದೊಡ್ಡಣ್ಣ ಭಜಂತ್ರಿ, ಶಿಕ್ಷಕಿ ದ್ರಾಕ್ಷಾಯಣಿ ಭಜಂತ್ರಿ ಉಪಸ್ಥಿತ–ರಿದ್ದರು.

ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಪ್ರಾಚಾರ್ಯೆ ವಸುಧಾ ನಾರ್ವೇಕರ, ಹಿರಿಯ ಕಾರ್ಯ ಸಂಯೋಜಕಿ ದೀಪಾ ಜಂಬೂರೆ, ಬೋಧಕ ಮತ್ತು ಬೋಧಕರ ಹೊರತಾದ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

# ಮಕ್ಕಳ ಆನಲೈನ್ ಹಾಜರಾತಿ ದಾಖಲಿಸುವಲ್ಲಿ ನಿರ್ಲಕ್ಷ್ಯ ಬೇಡ



## ವಿಜಯಪುರ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ಶಾಲೆಗಳಲ್ಲಿ ಎಲ್‌ಬಿಎ, ಕಾಮ್ಸ್ ಹಾಗೂ ನಿರಂತರ ಹಾಜರಾತಿ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ಮಕ್ಕಳ ಕಲಿಕಾ ಪ್ರಗತಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ವಿಜಯಪುರ ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಹೇಳಿದರು.

ಪಟ್ಟಣದ ಎಂಪಿಎಸ್ ಶಾಲೆಯಲ್ಲಿ ಮಂಗಳವಾರ ನಡೆದ ಮುಖ್ಯಶಿಕ್ಷಕರ ಸಭೆಯಲ್ಲಿ ಮಾತನಾಡಿದ ಅವರು, 'ಕರ್ತವ್ಯ' ಆ್ಯಪ್‌ನಲ್ಲಿ 223 ಶಾಲೆಗಳ ಅಕ್ಷಾಂಶ– ರೇಖಾಂಶದ ಸಮಸ್ಯೆಗಳನ್ನು ಸರಿಪಡಿಸಲಾಗಿದ್ದು, 63 ಶಿಕ್ಷಕರ ಮಿಸ್‌ಮ್ಯಾಚ್ ಸಮಸ್ಯೆಯನ್ನೂ ಪರಿಹರಿಸಲಾಗಿದೆ. ವಿಜಯಪುರ ಗ್ರಾಮೀಣ ವಲಯದ 1ರಿಂದ 10ನೇ ತರಗತಿಯ ಸುಮಾರು 42 ಸಾವಿರ ಮಕ್ಕಳು ನಿರಂತರ ಆ್ಯಪ್‌ನಲ್ಲಿ ದಾಖಲಾಗಬೇಕಿದ್ದು, ಈ ಪೈಕಿ 38,500 ಮಕ್ಕಳ ನೋಂದಣಿ ಪೂರ್ಣಗೊಂಡಿದೆ. ಸುಮಾರು 3,500 ಡುಪ್ಲಿಕೇಟ್ ದಾಖಲೆಗಳಿದ್ದರೆ ಪರಿಶೀಲಿಸಿ ಡಿಲೀಟ್ ಮಾಡಬೇಕು ಎಂದು ಸೂಚಿಸಿದರು.

ಶಾಲೆಗಳಲ್ಲಿ ಪ್ರತಿದಿನ ಶೇ.50ರಷ್ಟು ಹಾಜರಾತಿಯನ್ನೂ ದಾಟದಿರುವುದು ಗಮನಕ್ಕೆ ಬಂದಿದೆ. ತಾಂತ್ರಿಕ ದೋಷದಿಂದ ಹಾಜರಾತಿ ದಾಖಲಿಸಲು ಸಾಧ್ಯವಾಗದಿದ್ದರೆ ಅದನ್ನು ಪರಿಹ–ರಿಸಲಾಗುವುದು. ಆದರೆ ತಾಂತ್ರಿಕ ಸಮಸ್ಯೆ ಹೊರತುಪಡಿಸಿ ಯಾವುದೇ ಕಾರಣಕ್ಕೂ ಮಕ್ಕಳ ಹಾಜರಾತಿ ದಾಖಲಿಸುವುದನ್ನು ತಪ್ಪಿಸಬಾರದು. ಪ್ರತಿ ದಿನ ಪ್ರತಿಯೊಬ್ಬ ಮಗುವಿನ ಹಾಜರಾತಿಯನ್ನು ನಿರಂತರ ಆ್ಯಪ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಶಿಕ್ಷಣ ಸಂಯೋಜಕ ಜಿ.ಟಿ.ಕಾಗವಾಡ, ಡಿ.ಜಿ.ಸಜ್ಜನ, ಆರ್.ಬಿ.ಪಾಟೀಲ ಎಂ.ಎಸ್.ಟಕ್ಕಳಕಿ, ಸಾಬು ಗಗನಮಾಲಿ, ಮಹಾಂತೇಶ ರಾಠೋಡ, ಎಂ.ಎಂ.ಮಕಾನದಾರ, ಬಿ.ಸಿ.ನಾವಿ, ಬಿ.ವೈ.ಮೇಡೆಗಾರ, ಎಲ್ಲ ಶಾಲೆಯ ಮುಖ್ಯಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

# ಸಹಕಾರ ಸಂಘಗಳ ನೋಂದಣಿ ರದ್ದತಿ ಕ್ರಮ ಆಕ್ಷೇಪಣೆಗೆ ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೀರ್ಘಕಾಲದಿಂದ ಯಾವುದೇ ರೀತಿಯ ಕಾರ್ಯ ನಿರ್ವಹಿಸದೇ ಸ್ಥಗಿತಗೊಂಡಿರುವ ಮುದ್ದೇಬಿಹಾಳ ತಾಲೂಕಿನ 10 ಸಹಕಾರ ಸಂಘಗಳ ನೋಂದಣಿಯನ್ನು ರದ್ದುಗೊಳಿಸುವ ಪ್ರಕ್ರಿಯೆಯನ್ನು ಮುದ್ದೇಬಿಹಾಳ ತಾಲೂಕಿನ ಸಮಾಪನಾಧಿಕಾರಿಗಳು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ ಆರಂಭಿಸಿದ್ದು, 7 ದಿನಗಳೊಳಗಾಗಿ ಆಕ್ಷೇಪಣೆ ಸಲ್ಲಿಸಲು ಕಾಲಾವಲಾಶ ನೀಡಲಾಗಿದೆ.

ಈ ಸಂಘಗಳು ತಮ್ಮ ಬೈಲಾಗಳ ಉದ್ದೇಶಗಳಂತೆ ಕಾರ್ಯನಿರ್ವಹಿಸದಿರುವುದರಿಂದ, ಇವುಗಳನ್ನು ಸಮಾಪನಗೊಳಿಸಲು ಹಕಾರ ಸಂಘಗಳ ಉಪ ನಿಬಂಧಕರು ಆದೇಶ ಹೊರಡಿಸಿ, ಸಮಾಪನಾಧಿಕಾ–ರಿಗಳನ್ನು ನೇಮಕ ಮಾಡಿದ್ದಾರೆ.

ಈ ಸಹಕಾರ ಸಂಘಗಳ ಆಸ್ತಿ–ಪಾಸ್ತಿ, ಸಾಲ ಅಥವಾ ಬರತಕ್ಕ ಬಾಕಿ ಹಣದ ಕುರಿತು ಯಾವುದೇ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಆಕ್ಷೇಪಣೆಗಳಿದ್ದಲ್ಲಿ, ಸೂಕ್ತ ದಾಖಲೆಗಳೊಂದಿಗೆ ಈ ಪ್ರಕಟಣೆ ಹೊರಡಿಸಿದ ಏಳು ದಿನಗಳೊಳಗಾಗಿ ಮುದ್ದೇಬಿಹಾಳದ ಸಮಾಪನಾಧಿಕಾ–ರಿಗಳು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿಗಳ ಕಚೇರಿಗೆ ಸಲ್ಲಿಸಬಹುದಾಗಿದೆ.

ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಬಾರದಿದ್ದರೆ, ನಿಯಮಾನುಸಾರ ಸಂಘಗಳ ನೋಂದಣಿ ರದ್ದತಿಗೆ ಕ್ರಮ ಕೈಗೊಳ್ಳಲಾಗುವುದು. ನೋಂದಣಿ ರದ್ದತಿ ಪ್ರಕ್ರಿಯೆಯಲ್ಲಿರುವ 10 ಸಹಕಾರ ಸಂಘಗಳಲಾದ: ಶ್ರೀ ಸೇವಾಲಾಲ್ ಪತ್ತಿನ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ. ಮುದ್ದೇಬಿಹಾಳ ಗ್ರಾಮೀಣದ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ. ಮುದ್ದೇಬಿಹಾಳ ತಾಲೂಕಾ ಬಸವೇಶ್ವರ ಶಿಕ್ಷಕರ, ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ. ಡಾ. ಅಂಬೇಡ್ಕರ್ ರಾಜ್ಯ ಸರ್ಕಾರಿ ನೌಕರರ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ. ವಿಶ್ವಕರ್ಮ ಕುಶಲಕರ್ಮಿಗಳ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ. ಮುದ್ದೇಬಿಹಾಳ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ. ವೀರೇಶನಗರ ಮೀನುಗಾರಿಕೆ ಸಹಕಾರ ಸಂಘ ನಿಯಮಿತ, ವೀರೇಶನಗರ, ತಾಲೂಕು: ಮುದ್ದೇಬಿಹಾಳ, ಜಿಲ್ಲೆ: ವಿಜಯಪುರ. ನೆಲಗೇಣ ಮಹಿಳಾ ವಿವಿಧೋದ್ದೇಶಗಳ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ, ತಾಲೂಕು: ಮುದ್ದೇಬಿಹಾಳ, ಜಿಲ್ಲೆ: ವಿಜಯಪುರ. ತಂಗಡಗಿ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತ, ತಂಗಡಗಿ, ತಾಲೂಕು: ಮುದ್ದೇಬಿಹಾಳ, ಜಿಲ್ಲೆ ವಿಜಯಪುರ. ಸ್ತ್ರೀ ಶಕ್ತಿ ಮಹಿಳಾ ವಿವಿಧೋದ್ದೇಶಗಳ ಸಹಕಾರ ಸಂಘ ನಿಯಮಿತ, ಮುದ್ದೇಬಿಹಾಳ, ತಾಲೂಕು: ಮುದ್ದೇಬಿಹಾಳ ಸಹಕಾರ ಸಂಘಗಳಿವೆ ಎಂದು ಸಮಾಪನಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

# ಕಾರ್ಯನಿರ್ವಹಿಸದ ಸಹಕಾರ ಸಂಘಗಳ ನೋಂದಣಿ ರದ್ದತಿ ಕ್ರಮ ಆಕ್ಷೇಪಣೆಗೆ ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ತಾಲೂಕಿನಲ್ಲಿ ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿರುವ 10 ವಿವಿಧ ಸಹಕಾರ ಸಂಘಗಳನ್ನು ಸಮಾಪನೆಗೊಳಿಸಿ, ಅವುಗಳ ನೋಂದಣಿಯನ್ನು ರದ್ದುಪಡಿಸಲು ಸಹಕಾರ ಇಲಾಖೆ ನಿರ್ಧರಿಸಿದೆ.

ಈ ಸಂಘಗಳು ತಮ್ಮ ನೋಂದಾಯಿತ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಜತೆಗೆ ಅವುಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರ ಬಗ್ಗೆ ಮಾಹಿತಿ ಲಭ್ಯವಿಲ್ಲ. ಹಲವು ವರ್ಷಗಳಿಂದ ಈ ಸಂಘಗಳ ವ್ಯವಹಾರಗಳ ಲೆಕ್ಕಪರಿಶೋಧನೆಯೂ ಆಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಈ ಕೆಳಗಿನ ಸಂಘಗಳಲ್ಲಿ ಸಾರ್ವಜನಿಕರಿಗೆ ಅಥವಾ ವ್ಯಕ್ತಿಗಳಿಗೆ ಯಾವುದೇ ಕೊಡತಕ್ಕ ಅಥವಾ ಬರತಕ್ಕ ಬಾಬುಗಳು (ವಹಿವಾಟು/ಬಾಕಿ) ಇದ್ದಲ್ಲಿ, ಸೂಕ್ತ ದಾಖಲೆಗಳೊಂದಿಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ 07 ದಿನಗಳ ಒಳಗಾಗಿ ಸಮಾಪನಾಧಿಕಾರಿ ಹಾಗೂ ಸಹಕಾರ ಸಂಘಗಳ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ (ವಿಜಯಪುರ ಉಪವಿಭಾಗ, ವಿಜಯಪುರ) ಇವರನ್ನು ಸಂಪರ್ಕಿಸಬಹುದಾಗಿದೆ.

ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ಸಂಘಗಳ ನೋಂದಣಿ ರದ್ದತಿಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ನೋಂದಣಿ ರದ್ದತಿಗೆ ಗುರಿಯಾಗಿರುವ ಸಹಕಾರ ಸಂಘಗಳ ವಿವರ: ಶಿವಣಗಿ ವಿವಿಧೋದ್ದೇಶಗಳ ಸಹಕಾರ ಸಂಘ ನಿ. ಶಿವಣಗಿ ಸವಿತಾ ಗಾಯತ್ರಿ ಸಹಕಾರ ಸಂಘ ನಿ. ವಿಜಯಪುರ ಬಂಜಾರಾ ಮತ್ತು ಮಹಿಳಾ ಕೈಗಾ–ರಿಕಾ ಸಹಕಾರ ಸಂಘ ನಿ. ಹಂಚಿನಾಳ ಕಲ್ಪವೃಕ್ಷ ಗ್ರಾಹಕರ ಸಹಕಾರ ಸಂಘ ನಿ. ಅಫಜಲಪೂರಟಾಕೆ, ವಿಜಯಪುರ ರಕ್ಷಾ ಪತ್ತಿನ ಸಹಕಾರ ಸಂಘ ನಿ. ವಿಜಯಪುರ ವಿದ್ಯಾನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ. ವಿಜಾಪುರ ಶಿವಶರಣ ಹರಳಯ್ಯ ವಿವಿಧೋದ್ದೇಶಗಳ ಸಹಕಾರ ಸಂಘ ನಿ. ಬಾಬಾನಗರ, ವಿಜಯಪುರ ಶ್ರೀ ರೇಣುಕಾ ಪತ್ತಿನ ಸಹಕಾರ ಸಂಘ ನಿ. ವಿಜಯಪುರ ವಿಜಯಪುರ ನಗರ ಟಿನ್ ತಗಡಿನ ಸಾಮಾನಗಳ ತಯಾರಕರ ಕೂಲಿಕಾರರ ಸಹಕಾರ ಸಂಘ ನಿ. ವಿಜಯಪುರ ಸತ್ತಾರ ಪತ್ತಿನ ಸಹಕಾರ ಸಂಘ ನಿ. ವಿಜಯಪುರ (ಮತ್ತು ಭಾರತ ಕೋಳಿ ಸಾಕಾಣಿಕೆ ಮತ್ತು ಮಾರಾಟಗಾರರ ಸಹಕಾರ ಸಂಘ ನಿ.ವಿಜಯಪುರ) ಎಂದು ಸಮಾಪನಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

# 'ಬಯಕೆಗಳ ಬೆನ್ನೇರಿ' & 'ಪತಂಗ' ಕೃತಿಗಳ ಅವಲೋಕನ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಬಯಕೆಗಳಿಗೆ ಮೀತಿ ಇಲ್ಲದಾಗ ಜೀವನದಲ್ಲಿ ಯಾವೆಲ್ಲ ಕಷ್ಟ, ಕಾರ್ಪಣ್ಯ, ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ ಎಂಬ ಅಂಶಗಳಿಗೆ 'ಬಯಕೆಗಳ ಬೆನ್ನೇರಿ' ಕಾದಂಬರಿ ನೀತಿ ಪಾಠದಂತಿದೆ ಎಂದು ಸಿಂದಗಿ ಜಿ.ಪಿ.ಪೋರವಾಲ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಆರ್.ಎಮ್. ಪಾಟೀಲ ಹೇಳಿದರು.

ಪಟ್ಟಣದ ಎಸ್.ಜೆ.ಎಮ್.ವ್ಹಿ.ವ್ಹಿ.ಸಂಘ, ಶ್ರೀ ಸಿದ್ಧೇಶ್ವರ ಸ್ವಾಮೀಜಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯ ದೇವರಹಿಪ್ಪರಗಿ, ಮಾತೋಶ್ರೀ ಗುರುಬಸಮ್ಮ ಹ. ಸೋಮಾಪುರ ಸೇವಾಸಂಸ್ಥೆ ಸಿಂದಗಿ ಹಾಗೂ ಲಾಯನ್ಸ್ ಕ್ಲಬ್ ಸಿಂದಗಿ ಇವರುಗಳ ಆಶ್ರಯದಲ್ಲಿ ಶನಿವಾರ ಜರುಗಿದ ಕೆ.ಎಚ್.ಸೋಮಾಪುರ ರಚಿತ 'ಬಯಕೆಗಳ ಬೆನ್ನೇರಿ' ಕಾದಂಬರಿ ಹಾಗೂ ಪತಂಗ ಕಥ–ಾಸಂಕಲನ ಕೃತಿಗಳ ಅವಲೋಕನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಮಹಿಳೆಯರು ವಿಶೇಷವಾಗಿ ಹದಿಹರೆಯದ ಹೆಣ್ಣುಮಕ್ಕಳು ತಮ್ಮ ಕಾಲೇಜು ದಿನಗಳಲ್ಲಿ ಬಯಕೆಗಳ ಬೆನ್ನುಹತ್ತಿ ಎದುರಿಸುವ ಪರಿಸ್ಥಿತಿಗಳನ್ನು ನೈಜವಾಗಿ ತಿಳಿಸುವಲ್ಲಿ ಕಾದಂಬರಿ ಅತ್ಯಂತ ಯಶಸ್ವಿ ಎಂದು ಅವಲೋಕಿಸಿ ಮಾತನಾಡಿದರು.

ಸಿಂದಗಿ ಎಚ್.ಜಿ ಕಾಲೇಜು ಪ್ರಾಚಾರ್ಯ ಎ.ಆರ್. ಹೆಗ್ಗನದೊಡ್ಡಿ ಪತಂಗ ಕಥಾ ಸಂಕಲನ ಅವಲೋಕಿಸಿ ಮಾತನಾಡಿ, ದೈಹಿಕ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯ ನಂತರ 14 ವಿವಿಧ ಸಾಹಿತ್ತಿಕ ಕೃತಿಗಳ ಕೊಡುಗೆಗಳನ್ನು ನೀಡಿದ ಕೆ.ಎಚ್.ಸೋಮಾಪುರ ಅವರನ್ನು ಆಧುನಿಕ ಮುದ್ದಣ್ಣ ಎಂದರು ತಪ್ಪಾಗಲಾರದು ಎಂದರು.

ಎಂ.ಸಿ.ಮನಗೂಳಿ ಕಾಲೇಜಿನ ಪ್ರಾಧ್ಯಾಪಕ ಡಾ.ಅರವಿಂದ ಮನಗೂಳಿ ಮಾತನಾಡಿದರು. ಕೆ.ಎಚ್. ಸೋಮಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್.ಜೆ. ಎಮ್.ವ್ಹಿ.ವ್ಹಿ.ಸಂಘದ ಅಧ್ಯಕ್ಷ ವ್ಹಿ.ಕೆ. ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಸಿಂದಗಿ ಆರ್.ಡಿ.ಪಾಟೀಲ ಕಾಲೇಜು ನಿವೃತ್ತ ಪ್ರಾಚಾರ್ಯ ಆಯ್.ಬಿ.ಬಿರಾದಾರ, ನಿವೃತ್ತ ಪ್ರಾಧ್ಯಾಪಕ ಎಸ್.ವೈ.ಬೀಳಗಿ, ಎಚ್.ಜಿ.ಕಾಲೇಜು ನಿವೃತ್ತ ಪ್ರಾಚಾರ್ಯ ಎಸ್.ಎಸ್.ಪಾಟೀಲ, ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ನಿವೃತ್ತ ಪ್ರಾಚಾರ್ಯ ಅಶೋಕ ಬೂದಿಹಾಳ ಲಾಯನ್ಸ್ ಕ್ಲಬ್ ಅಧ್ಯಕ್ಷ ಡಾ.ಅಂಬರೀಷ ಬಿರಾದಾರ, ಶಿಕ್ಷಕ ಎಸ್. ಎಸ್.ಮಲ್ಲೇದ, ಸಾಹಿತಿ ಶಿಂಪಿಗೇರ, ಎಸ್.ಜೆ.ಎಮ್.ವ್ಹಿ.ವ್ಹಿ. ಸಂಘದ ಆಡಳಿತಾಧಿಕಾರಿ ಕೆ.ಪಿ.ಮಾಲಿಪಾಟೀಲ, ಡಾ.ಆರ್. ಆರ್.ನಾಯಿಕ, ಎಂ.ಆರ್.ಶಿರಸಂಗಿಮಠ, ಸಿ.ಕೆ.ಕುದರಿ, ಎಸ್.ಎನ್.ಬಸವರೆಡ್ಡಿ ಇದ್ದರು.

# ಸಮಾಜವನ್ನು ಒಗ್ಗೂಡಿಸುವ ಶಕ್ತಿ ಧರ್ಮಕ್ಕಿದೆ : ರಂಭಾಪುರಿಶ್ರೀ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಧರ್ಮವೆಂದರೆ ಕೇವಲ ಮಾತಲ್ಲ. ಆಡಿದಂತೆ ನಡೆದು ತೋರಿಸುವುದೇ ನಿಜವಾದ ಧರ್ಮ. ಅಸಹಾಯಕರ ಕಷ್ಟಕ್ಕೆ ಸ್ಪಂದಿಸುವುದೇ ಧರ್ಮದಜೀವಾಳ.ಧರ್ಮವು ಸಮಾಜವನ್ನು ಒಗ್ಗೂಡಿಸುವ ಶಕ್ತಿಯಾಗಬೇಕೇ ಹೊರತು ವಿಭಜಿಸುವ ಸಾಧನವಾಗಬಾರದೆಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಶ್ರೀಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ಸೋಮವಾರ ಶ್ರೀಗುರು ಮಹಾಂತೇಶ್ವರ ಹಿರೇಮಠದ ಶ್ರಾವಣ ಪುರಾಣ ಮಂಗಲ ಮತ್ತು ನೂತನ ಕಲ್ಯಾಣ ಮಂಟಪ ಉದ್ಘಾಟನೆ ಅಂಗವಾಗಿ ಜರುಗಿದ ಜನಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಯುವ ಜನರು ಆಧುನಿಕತೆ ಶಿಕ್ಷಣ ಮತ್ತು ತಂತ್ರಜ್ಞಾನದ ಅರಿವಿನೊಂದಿಗೆ ನಮ್ಮ ಸಂಸ್ಕೃತಿ ಪರಂಪರೆ ಮತ್ತು ನೈತಿ–ಕ ಮೌಲ್ಯಗಳನ್ನು ಮರೆಯಬಾರದು. ಆಧುನಿಕತೆ ಬೇಕು. ಆದರೆ ಮೂಲ ಸಂಸ್ಕೃತಿ ಬೇರುಗಳೊಂದಿಗೆ ಬದುಕನ್ನು ಕಟ್ಟಿಕೊಳ್ಳಬೇಕಾದ ಅವಶ್ಯಕತೆಯಿದೆ. ಶ್ರೀಜಗದ್ಗುರು ರೇಣುಕಾಚಾರ್ಯರ ಅತ್ಯಮೂಲ್ಯವಾದ ಜೀವನ ದರ್ಶನದ ಸಂದೇಶಗಳು ಸರ್ವ ಕಾಲಕ್ಕೂ ಸರ್ವರಿಗೂ ಅನ್ವಯಿಸುತ್ತವೆ.

ಅಹಿಂಸಾದಿ ಧ್ಯಾನ ಪರ್ಯಂತರವಾದ ದಶಧರ್ಮ ಸೂತ್ರಗಳು ಬದುಕಿ ಬಾಳುವ ಜನಾಂಗಕ್ಕೆ ದಾರಿದೀಪ. ಮಠಾಧ್ಯಕ್ಷ ಬಸವಲಿಂಗಶ್ರೀಗಳ ನೂತನ ಕಲ್ಯಾಣ ಮಂಟಪದ ಲೋಕಾರ್ಪಣೆ ಸಮಾರಂಭದಲ್ಲಿ ಪಾಲ್ಗೊಂಡಿರುವುದು ಸಂತೋಷದ ಸಂಗತಿ. ಶ್ರೀಗಳವರ ಕ್ರಿಯಾಶೀಲ ಬದುಕು ಇನ್ನಿತರರಿಗೆ ಮಾದ–ರಿಯಾಗಿದೆ. ನೂತನ ಕಲ್ಯಾಣ ಮಂಟಪದ ಮೂಲಕ ಸಾಮಾಜಿಕ ಸೇವೆ ನಡೆಯಲಿ. ವಿವಾಹಗಳ ಜೊತೆಗೆ ಧಾರ್ಮಿಕ ಉಪನ್ಯಾಸ, ವಿದ್ಯಾರ್ಥಿಗಳ ಪ್ರತಿಭಾಪುರಸ್ಕಾರ, ಬಡಕುಟುಂಬಗಳಿಗೆ ನೆರವು, ಆರೋಗ್ಯಶಿಬಿರ, ರಕ್ತದಾನ ಮೊದಲಾದ ಕಾರ್ಯಕ್ರಮಗಳಿಗೂ ಈ ಕಲ್ಯಾಣಮಂಟಪ ಬಳಕೆಯಾಗುವಂತಾಗಲೆಂದು ಶುಭ ಹಾರೈಸಿದರು.

ಆಲಮೇಲ ಹಿರೇಮಠದ ಚಂದ್ರಶೇಖರ ಶ್ರೀ ಮಾತನಾಡಿ, ಈ ಮಂಟಪ ಕೇವಲ ಇಟ್ಟಿಗೆ ಸಿಮೆಂಟಿನ ಕಟ್ಟಡವಾಗದೇ ಧರ್ಮ, ಸಂಸ್ಕೃತಿ, ಮಾನವೀಯತೆಯ ಕಲ್ಯಾಣ ಕೇಂದ್ರವಾಗಿ ರೂಪುಗೊಳ್ಳಲೆಂದು ಆಶಿಸಿದರು.

ನೇತೃತ್ವ ವಹಿಸಿದ ಕೋರವಾರ ಶ್ರೀಗುರು ಮಹಾಂತೇಶ್ವರಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ಕೋರವಾರ ಗ್ರಾಮದ ಜನತೆಯ ಬಹು ದಿನಗಳ ಕನಸು ನನಸಾಗಿದೆ. ಜಗದ್ಗುರುಗಳ ಶುಭಾಗಮನ ನಮ್ಮೆಲ್ಲರ ಬಾಳಿಗೆ ಹೊಸ ಸ್ಫೂರ್ತಿಯನ್ನು ತಂದು ಕೊಟ್ಟಿದೆ. ವಿವಾಹಗಳನ್ನು ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸುವ ಮನೋಭಾವ ಬೆಳೆಯಬೇಕು. ಸಂಪತ್ತನ್ನು ಶಿಕ್ಷಣ,ಆರೋಗ್ಯ ಮತ್ತು ಸಮಾಜಸೇವೆಗೆ ಬಳಸುವ ಚಿಂತನೆ ಬೆಳೆಯಬೇಕು ಎಂದರು.

ಸಮಾರಂಭಕ್ಕೂ ಮುನ್ನ ಬಾಳೆಹೊನ್ನೂರು ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಸಕಲ ವಾದ್ಯ ವೈಭವಗಳೊಂದಿಗೆ ಜರುಗಿತು. ಸಮಾರಂಭದ ನಂತರ ಅನ್ನ ದಾಸೋಹ ಜರುಗಿತು.

ಗಿರಿಸಾಗರದ ರುದ್ರಮುನಿ ಶ್ರೀ, ಬಿಲ್‌ಕೆರೂರು ಸಿದ್ಧಲಿಂಗ ಶ್ರೀ, ಮುಖೇಡ ವಿರೂಪಾಕ್ಷ ಶ್ರೀ, ಬರ್ದಾಪುರ ಚನ್ನಬಸವ ಶ್ರೀ, ಸಗರ ಮರುಳಮಹಾಂತ ಶ್ರೀ, ಯಂಕಂಚಿ ಅಭಿನವ ರುದ್ರಮುನಿ ಶ್ರೀ, ಕೋರವಾರ ಚೌಕಿಮಠದ ಮುರಘೇಂದ್ರ ಸ್ವಾಮೀಜಿ. ಕೋರವಾರ ವೈದ್ಯ ಡಾ॥–ಎಸ್.ಎ.ಹಿರೇಮಠ ಖ್ಯಾತ ನೇತ್ರತಜ್ಞ ಡಾ॥ ಪ್ರಭುಗೌಡ ಪಾಟೀಲ ಇದ್ದರು.

# ನಿಗದಿತ ಅವಧಿಯಲ್ಲಿ ಗುರಿ ಸಾಧಿಸಿ, ಅನುದಾನ ಲ್ಯಾಪ್ಸ್ ಆಗದಿರಲಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಸರ್ಕಾರದ ನಿಯಮಾವಳಿಗಳ ಪ್ರಕಾರ ಪರಿಶಿಷ್ಟ ಜಾತಿ ಉಪ ಹಂಚಿಕೆ ಹಾಗೂ ಗಿರಿಜನ ಉಪ ಹಂಚಿಕೆ ಯೋಜನೆಯಡಿ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಮಾಡಬೇಕು. ನಿಗದಿತ ಅವಧಿಯಲ್ಲಿ ಗುರಿ ಸಾಧಿಸಬೇಕು. ಯಾವುದೇ ಕಾರಣಕ್ಕೂ ಅನುದಾನ ಲ್ಯಾಪ್ಸ್ ಆಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ 2026–27ನೇ ಸಾಲಿನ ಪರಿಶಿಷ್ಟ ಜಾತಿ ಉಪ ಹಂಚಿಕೆ ಹಾಗೂ ಗಿರಿಜನ ಉಪ ಹಂಚಿಕೆ ಯೋಜನೆಯಡಿ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ವಲಯ ಯೋಜನೆ ಕಾರ್ಯಕ್ರಮಗಳ ಇಲಾಖಾವಾರು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಗಳ ನೈಜ ಫಲಾನುಭವಿಗಳನ್ನು ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಅತ್ಯಂತ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವ ಮೂಲಕ ಅರ್ಹರಿಗೆ ಯೋಜನೆಗಳನ್ನು ತಲುಪಿಸಬೇಕು ಎಂದರು. ಜೊತೆಗೆ, ತಾಲೂಕು ಮಟ್ಟದಲ್ಲಿ ಪ್ರಗತಿ ಪರಿಶೀಲನೆಗೆ ಸಂಬಂಧಿಸಿದಂತೆ ತಹಶೀಲ್ದಾರರು ಹಾಗೂ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ನಿರಂತರ ಸಭೆಗಳನ್ನು ನಡೆಸಿ ಅನುಷ್ಠಾನಕ್ಕೆ ವೇಗ ನೀಡಬೇಕು ಎಂದು ವಿವರಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಮಹೇಶ ಪೋತದಾರ, ಜಂಟಿ ಕೃಷಿ ನಿರ್ದೇಶಕರಾದ ಶಿವನಗೌಡ ಪಾಟೀಲ, ಹೆಸ್ಕಾಂ ಅಧೀಕ್ಷಕ ಅಭಿಯಂತರರಾದ ಸಿದ್ದಪ್ಪ ಬಿಂಜಗೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಹಣಮಂತ ಕಾಲತಿಪ್ಪಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಮಲ್ಲಿನಾಥ ಕುಸನಾಳ, ಕ್ರೀಡಾಧಿಕಾರಿ ರಾಜಶೇಖರ ಧೈವಾಡಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ ಸೇ–ರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತ–ರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR